# ಪರಿಚಯ

## ಲೇಖಕ

ಪವಿತ್ರಾತ್ಮನು ರೋಮಾಪುರದವರಿಗೆ ಬರೆದ ಪತ್ರಿಕೆಯ ದೈವಿಕ ಲೇಖಕನಾಗಿದ್ದನು (ನೋಡಿರಿ 1 ಕೊರಿಂಥ 2:4, 10, 13; 2 ಪೇತ್ರ 1:21). ಆತ್ಮನಿಂದ ಪ್ರೇರಣೆಗೊಂಡ ಮಾನವ ಲೇಖಕನ ಹೆಸರನ್ನು 1:1 ರಲ್ಲಿ ತಿಳಿಸಲಾಗಿದೆ: "ಯೇಸು ಕ್ರಿಸ್ತನ ದಾಸನೂ ಅಪೊಸ್ತಲನಾಗುವದಕ್ಕೆ ಕರೆಯಲ್ಪಟ್ಟವನೂ ದೇವರ ಸುವಾರ್ತೆಯನ್ನು ಸಾರುವದಕ್ಕೆ ನೇಮಿಸಲ್ಪಟ್ಟವನೂ ಆಗಿರುವ ಪೌಲನು." ನನಗೆ ಗೊತ್ತಿರುವ ಯಾವ ಸಂಪ್ರದಾಯಿಕ ಪಂಡಿತನು ಸಹ ಈ ಪುಸ್ತಕವನ್ನು ಅಪೊಸ್ತಲನಾದ ಪೌಲನು ಬರೆದನೆಂಬದನ್ನು ಸಂಶಯಿಸುವದಿಲ್ಲ. ಟೀಕೆಕಾರರು ಸಹ ಪೌಲನೆಂಬವನು ಇದ್ದನು, ಮತ್ತು ಆತನು ಕೆಲವು ಪತ್ರಿಕೆಗಳನ್ನು ಬರೆದನು ಮತ್ತು ಅದರಲ್ಲೊಂದು ರೋಮಾಪುರ ಪತ್ರಿಕೆ ಸಹ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. Charles Hodgeರ ತೀರ್ಪು ಹೀಗಿತ್ತು, "ಈ ಪತ್ರಿಕೆಯಷ್ಟು ಹೆಚ್ಚು ಸ್ಪಷ್ಟ ದೃಢಿಕರಣ ಪಡೆದಿರುವ ಇನ್ಯಾವುದೇ ಪ್ರಾಚೀನ ಪುಸ್ತಕಗಳು . . . ಈ ಜಗತ್ತಿನಲ್ಲಿಲ್ಲ."[1]

ಈ ಪತ್ರಿಕೆಯು ತೆರ್ತ್ಯನೆಂಬವನಿಗೆ ಹೇಳಿ ಬರೆಯಲ್ಪಟ್ಟಿತ್ತೆಂದು ತೋರುತ್ತದೆ, ಆತನು ಅಂತ್ಯದಲ್ಲಿ ತನ್ನ ವಂದನೆಗಳನ್ನು ಸೇರಿಸುತ್ತಾನೆ (16:22). ಇದು ಬಹುಶಃ ರೋಮಾಪುರಕ್ಕೆ ಫೊಯಿಬೆ ಎಂಬ ಕ್ರೈಸ್ತ ಸ್ತ್ರೀಯಿಂದ ಕೊಂಡೊಯ್ಯಲ್ಪಟ್ಟಿತು (ನೋಡಿರಿ 16:1, 2). ಆ ದಿನಗಳಲ್ಲಿ, ಇಂದು ನಮಗಿರುವ ಪ್ರಕಾರ ಅಂಚೆ ಸೇವೆ ಇರಲಿಲ್ಲ. ಸರ್ಕಾರವು ವ್ಯಾಪಾರಕ್ಕೆ ಸಂಬಂಧಿಸಿದಂತೆ ಸಂದೇಶಕರನ್ನು ನೇಮಿಸಿತ್ತು. ಆದರೆ ಸಾಮಾನ್ಯ ಜನರು ತಮಗೆ ಸಾಧ್ಯವಾದ ಉತ್ತಮ ದಾರಿಯನ್ನು ಅನುಸರಿಸುತ್ತಿದ್ದರು. ಅವರು ಹೋಗಲು ಬಯಸುವ ಸ್ಥಳಕ್ಕೆ ಪ್ರಯಾಣಿಸುತ್ತಿದ್ದ ಮಿತ್ರರು ಅಥವಾ ಪರಿಚಿತರ ಕೈಯಲ್ಲಿ ಪತ್ರಿಕೆಗಳನ್ನು ಕಳುಹಿಸಿ ಕೊಡುತ್ತಿದ್ದರು.

## ಸ್ವೀಕರಿಸಿದವರು

ಈ ಪತ್ರಿಕೆಯನ್ನು ಸ್ವೀಕರಿಸಿದವರ ಹೆಸರನ್ನು 1:7 ರಲ್ಲಿ ತಿಳಿಸಲಾಗಿದೆ: "ರೋಮಾಪುರದಲ್ಲಿ ದೇವರಿಗೆ ಪ್ರಿಯರೂ ದೇವಜನರಾಗುವದಕ್ಕೆ ಕರೆಯಲ್ಪಟ್ಟವರೂ ಆಗಿರುವವರೆಲ್ಲರಿಗೆ ಬರೆಯುತ್ತೇನೆ." ಮತ್ತೊಂದು ಸಾರಿ, ನಮಗೆ ಒಮ್ಮತವಿರುತ್ತದೆ: ಈ ಪತ್ರಿಕೆಯು ರೋಮಾಪುರದಲ್ಲಿ ಜೀವಿಸುತ್ತಿದ್ದ ಕ್ರೈಸ್ತರಿಗಾಗಿ ಬರೆಯಲ್ಪಟ್ಟಿದೆ. ಸಭೆ ಅಂದರೆ ಹೆಚ್ಚು ಕಡಿಮೆ ಕ್ರೈಸ್ತರ ಒಂದು ಸಮೂಹವಾಗಿರುವದರಿಂದ (ಕ್ರಿಸ್ತನ ರಕ್ತದಿಂದ ರಕ್ಷಿಸಲ್ಪಟ್ಟವರು), ಈ ಪತ್ರಿಕೆಯು ರೋಮಾಪುರದಲ್ಲಿದ್ದ "ಸಭೆಗೆ" —ಅಥವಾ ಆ ನಗರದಲ್ಲಿ ದ್ದ ಹಲವಾರು "ಗೃಹ ಸಭೆಗಳಿಗೆ" (ಸ್ಥಳೀಯ ಸಭೆಗಳಿಗೆ) ಬರೆಯಲ್ಪಟ್ಟಿದೆ ಎಂದು ಯೋಚಿಸುವದು

ಉತ್ತಮವಾಗಿರುತ್ತದೆ (ನೋಡಿರಿ 16:3, 5). ಈ ವ್ಯಾಖ್ಯಾನ ಪುಸ್ತಕ ಮತ್ತು ಇತರ ಬರಹಗಳಲ್ಲಿ ಸಹ "ರೋಮಾಪುರದಲ್ಲಿನ ಸಭೆಗೆ" ಬರೆದ ಪತ್ರಿಕೆ ಎಂದು ಕರೆಯಲ್ಪಡುವದು. ಇದು ರೋಮಾಪುರದಲ್ಲಿ ಜೀವಿಸುತ್ತಿದ್ದ ಎಲ್ಲಾ ಕ್ರೈಸ್ತರನ್ನು ಸೂಚಿಸುವ ಸರಳ ವಿಧವಾಗಿದೆ.

## ರೋಮಾಪುರದಲ್ಲಿನ ಸಭೆ

ರೋಮ್ ನಗರವು ವಿಶ್ವದಲ್ಲಿಯೇ ದೊಡ್ಡ ನಗರವಾಗಿತ್ತು. ಬ್ರಿಟನ್.ನಿಂದ ಅರಬಿಯಾ ವರೆಗೂ ವಿಸ್ತರಿಸಲ್ಪಟ್ಟಿದ್ದ ಬಲಿಷ್ಠ ರೋಮ್ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಅಮೆರಿಕದಲ್ಲಿ ಜೀವಿಸುವವರು ಇದನ್ನು ಆ ಕಾಲದ ನ್ಯೂಯಾರ್ಕ್ ನಗರ ಎಂದು ಭಾವಿಸಬಹುದು. ಇದು ಬ್ರಿಟನ್.ರಿಗೆ "ಲಂಡನ್," ಜಪಾನಿಯರಿಗೆ "ಟೋಕಿಯೊ" ಇದ್ದಂತೆ ಆಗಿರುತ್ತದೆ. ರೋಮ್ ನಗರವು ಆ ಕಾಲದ ರಾಜಕೀಯ, ಆರ್ಥಿಕ, ಅಥವಾ ಸಾಮಾಜಿಕ ಮುಖ್ಯ ಕೇಂದ್ರವೆಂದು ಪರಿಗಣಿಸಲ್ಪಟ್ಟಿತ್ತು. ಪೌಲನ ದಿನಗಳಲ್ಲಿ ಒಂದು ಮಾತಿತ್ತು, "ಎಲ್ಲಾ ದಾರಿಗಳೂ ರೋಮಿಗೆ ನಡಿಸುತ್ತವೆ." ರೋಮಾಪುರದವರಿಗೆ ಬರೆದ ಪತ್ರಿಕೆಯು ಬರೆಯಲ್ಪಡುವ ಸಮಯದಲ್ಲಿ, ನಿರೋ ಸಿಂಹಾಸನದಲ್ಲಿದ್ದನು ಮತ್ತು ಆತನ ಸಾಮ್ರಾಜ್ಯದ ವೈಭವ ಮತ್ತು ಅಧಿಕಾರವು ಉತ್ತುಂಗಕ್ಕೆ ಹತ್ತಿರವಾಗಿತ್ತು.

ರೋಮಾಪುರದಲ್ಲಿ ಹೇಗೆ ಮತ್ತು ಯಾವಾಗ ಸಭೆ ಸ್ಥಾಪಿಸಲ್ಪಟ್ಟಿತೆಂಬುದು ನಮಗೆ ನಿಖರವಾಗಿ ತಿಳಿದಿಲ್ಲ. ಪೇತ್ರನು ರೋಮಾಪುರದಲ್ಲಿ ಸಭೆಯನ್ನು ಸ್ಥಾಪಿಸಿದನು ಮತ್ತು ಆತನ ಮರಣದ ತನಕ ಇಪ್ಪತ್ತೈದು ವರ್ಷಗಳ ಕಾಲ ಆ ಸಭೆಯ ಬಿಷಪ್ ಆಗಿ ಸೇವೆ ಸಲ್ಲಿಸಿದನೆಂದು ಕ್ಯಾಥೋಲಿಕ್ ಸಭೆಯವರು ನಂಬುತ್ತಾರೆ. ಆ ಸಭೆಯ ಆರಂಭಿಕ ದಿನಗಳಲ್ಲಿ ಪೇತ್ರನು ರೋಮಾಪುರದಲ್ಲಿದ್ದ ನೆಂಬದಕ್ಕೆ ಯಾವ ಸಾಕ್ಷಿ ಇಲ್ಲವಾದರೂ, ಆ ನಂಬಿಕೆಗೆ ವಿರುದ್ಧವಾದ ಸಾಕಷ್ಟು ಸಾಕ್ಷಿಗಳಿರುತ್ತವೆ. ಉದಾಹರಣೆಗೆ, ರೋಮಾಪುರದ ವರಿಗೆ ಬರೆದ ಪತ್ರಿಕೆಯ ಅಂತ್ಯದಲ್ಲಿ, ಪೌಲನು ರೋಮಾಪುರದಲ್ಲಿ ತನಗೆ ಪರಿಚಯವಿದ್ದವರಿಗೆ ವಂದನೆ ಹೇಳುವಾಗ (16:3-15), ಆತನು ಪೇತ್ರನ ಕುರಿತು ಉಲ್ಲೇಖಿಸಲಿಲ್ಲ-ಆದರೆ ಆತನು ಅನೇಕ ಸಂದರ್ಭಗಳಲ್ಲಿ ಪೇತ್ರನನ್ನು ಭೇಟಿಯಾಗಿದ್ದನು (ಅಪೊಸ್ತಲರ ಕೃತ್ಯಗಳು 15:7, 12; ಗಲಾತ್ಯ 1:18; 2:7-9, 11-21). ಅಲ್ಲದೆ ಪೌಲನು ತನ್ನ ಮೊದಲ ಸೆರೆವಾಸದ ವೇಳೆಯಲ್ಲಿ ರೋಮಾಪುರದಿಂದ ಬರೆದ ಪತ್ರಿಕೆಗಳಲ್ಲಾಗಲಿ (ಎಫೆಸ, ಫಿಲಿಪ್ಪಿ, ಕೊಲೊಸ್ಸೆ, ಫಿಲಮೋನ) ಅಥವಾ ಎರಡನೆಯ ಸೆರೆವಾಸದ ವೇಳೆಯಲ್ಲಿ ಬರೆದ ಪತ್ರಿಕೆಗಳಲ್ಲಾಗಲಿ ಪೇತ್ರನ ಹೆಸರನ್ನು ಉಲ್ಲೇಖಿಸಲಿಲ್ಲ (2 ತಿಮೊಥೆ).

ಅಲ್ಲಿ ಏನು ಸಂಭವಿಸಿರಬಹುದು ಎಂಬದನ್ನು ಐತಿಹಾಸಿಕ ಸತ್ಯಾಂಶಗಳು ಸ್ಪಷ್ಟಪಡಿಸಬಲ್ಲವು. ರೋಮಾಪುರದಲ್ಲಿ ಒಂದು ಗಮನಾರ್ಹ ಪ್ರಮಾಣದಲ್ಲಿ ಯೆಹೂದ್ಯ ಜನಸಂಖ್ಯೆಯಿತ್ತು. ರೋಮ್ ಸಾಮ್ರಾಜ್ಯದ ಸೇನಾನಾಯಕನಾದ ಪೊಂಪೇಯು ಯೆಹೂದಿ ದೇಶ ಮತ್ತು ಯೆರೂಸಲೇಮನ್ನು ವಶಪಡಿಸಿಕೊಂಡಾಗ, ಅನೇಕ ಯೆಹೂದಿ ಸೆರೆಯಾಳುಗಳು ರೋಮ್.ಗೆ ಗುಲಾಮರಾಗಿ ಕಳುಹಿಸಲ್ಪಟ್ಟರು. ಅವರು ಮೋಶೆಯ ಧರ್ಮಶಾಸ್ತ್ರಕ್ಕೆ ಕಟ್ಟುನಿಟ್ಟಿನ ಶ್ರದ್ಧೆ ತೋರಿಸುತ್ತಿದ್ದದರಿಂದ ಅವರು ಗುಲಾಮರಾಗಿರುವದಕ್ಕೆ ಸರಿಹೊಂದಲಿಲ್ಲ. ಕ್ರಮೇಣದಲ್ಲಿ, ಅವರ ಯಜಮಾನರು ಅವರಲ್ಲಿ ಅನೇಕರನ್ನು ಬಿಡುಗಡೆಗೊಳಿಸಿದರು ಮತ್ತು ಅವರಿಗೆ ವಾಸಿಸಲು ತಿಬೆರಿಯ ನದಿಯ[2] ಆಚೆಯಲ್ಲಿ

ಸ್ಥಳವನ್ನು ಕೊಟ್ಟರು. ಆ ಪ್ರಾಂತವು ಅಪಖ್ಯಾತಿಯುಂಟು ಮಾಡುವಂಥ ದ್ದಾಗಿತ್ತು, ಆದರೆ ಯೆಹೂದ್ಯರು ಅಲ್ಲಿ ಯಶಸ್ವಿಯಾದರು.

ರೋಮಾಪುರದಲ್ಲಿದ್ದ ಯೆಹೂದ್ಯರು ಅಪೊಸ್ತಲರ ಕೃತ್ಯಗಳು 2:10 ರಲ್ಲಿ ಉಲ್ಲೇಖಿಸಲ್ಪಟ್ಟಿರುವ ಪಂಚಾಶತ್ತಮ ಹಬ್ಬಕ್ಕಾಗಿ ಯೆರೂಸಲೇಮಿಗೆ ಪ್ರಯಾಣಿಸುತ್ತಿದ್ದರು. ಬಹುಶಃ ಅವರಲ್ಲಿ ಕೆಲವರು ಪರಿವರ್ತನೆ ಹೊಂದಿದರು ಮತ್ತು ಸಭೆಯು ಚದುರಿಸಲ್ಪಟ್ಟ ಬಳಿಕ (ಅಪೊಸ್ತಲರ ಕೃತ್ಯಗಳು 8:1) ಅವರು ರೋಮಾಪುರಕ್ಕೆ ಹಿಂದಿರುಗಿ ಬಂದು ತಮ್ಮೊಂದಿಗೆ ಸುವಾರ್ತೆಯನ್ನು ಹೊತ್ತು ತಂದರು (ಅಪೊಸ್ತಲರ ಕೃತ್ಯಗಳು 8:4). ಕ್ರೈಸ್ತರು ಚದುರಿಸಲ್ಪಡುವ ಮುಂಚೆಯೇ ಅಪೊಸ್ತಲರು ಅವರ ಮೇಲೆ ಕೈಗಳನ್ನಿಟ್ಟಿದ್ದರಿಂದ (ನೋಡಿರಿ ಅಪೊಸ್ತಲರ ಕೃತ್ಯಗಳು 8:17, 18), ಅವರು ತಮ್ಮಷ್ಟಕ್ಕೆ ತಾವೇ ಕಾರ್ಯನಿರ್ವಹಿಸುವಂತೆ ಅದ್ಭುತವಾದ ಜ್ಞಾನವನ್ನು ಅವರಿಗೆ ನೀಡಿರಬಹುದಾದ ಸಾಧ್ಯತೆ ಸಹ ಇರುತ್ತದೆ. ಪ್ರವಾದನೆಯ ವರವಿದ್ದವರು ಬೋಧಿಸುವುದರ ಮೂಲಕ, ಅಥವಾ ಪ್ರೇರಿತ ಉಪದೇಶದ ಮೂಲಕವಾಗಿ ಈ ಅದ್ಭುತವಾದ ಜ್ಞಾನವು ಹರಡಿದ ಒಂದು ರೀತಿಯಾಗಿತ್ತು (12:6).

ಇನ್ನೊಂದು ಸಾಧ್ಯತೆಯೆಂದರೆ, ಪೌಲನಿಂದ ಪರಿವರ್ತನೆಗೊಂಡವರು ರೋಮಾಪುರಕ್ಕೆ ಪ್ರಯಾಣಿಸಿ ಅಲ್ಲಿ ಸಭೆಯನ್ನು ಸ್ಥಾಪಿಸಿದರು. (ಪೌಲನ ಪರಿಚಿತರ ಪಟ್ಟಿಯನ್ನು 16:3-15 ರಲ್ಲಿ ನೋಡಿರಿ.) ಆ ನಗರಕ್ಕೆ ಹೋಗಿ ಬರುವವರ ಸಂಖ್ಯೆ ನಿರಂತರವಾಗಿತ್ತು. ಆ ಪ್ರಯಾಣಿಕರಲ್ಲಿ ಅನೇಕರು ಪೌಲನಿಂದ ಪರಿವರ್ತನೆಗೊಂಡವರು ಸಹ ಇದ್ದರೆಂಬದರಲ್ಲಿ ಸಂಶಯವಿಲ್ಲ, ಮತ್ತು ಪೌಲನು ಬಹುಶಃ ಅವರ ಮೇಲೆ ಕೈಗಳನ್ನಿಟ್ಟು (ನೋಡಿರಿ ಅಪೊಸ್ತಲರ ಕೃತ್ಯಗಳು 19:1-7), ಅವರಿಗೆ ಅದ್ಭುತವಾದ ಸಾಮರ್ಥ್ಯಗಳನ್ನು ನೀಡಿರಬಹುದು.

ರೋಮಾಪುರದಲ್ಲಿ ಸಭೆಯು ಹೇಗೆ ಮತ್ತು ಯಾವಾಗ ಸ್ಥಾಪಿಸಲ್ಪಟ್ಟಿದ್ದರೂ, ಕ್ರಿ.ಶ. 49 ಅಥವಾ 50ಕ್ಕೆ ಮುಂಚೆಯೇ ಕ್ರಿಸ್ತನ ಪರಿಚಯ ಆ ನಗರಕ್ಕಿತ್ತು ಎಂಬದನ್ನು ಒಂದು ದಾಖಲೆ ತೋರಿಸುತ್ತದೆ. D. D. Whedon ಪ್ರಕಾರ, "ಯೆಹೂದ್ಯರೊಳಗೆ ಉಂಟಾಗಿದ್ದ ಸಂಭ್ರಮಗಳು ಹೇಗಿದ್ದವೆಂದರೆ (ಸುಮಾರು ಕ್ರಿ.ಶ. 50) ಅದು ನಗರದ ಅಧಿಕಾರಿಗಳ ಗಮನಕ್ಕೆ ಬಂತು, ಇದಕ್ಕೆಲ್ಲಾ ಕ್ರೈಸ್ಟಸ್ ಎಂಬುವವನು ಕಾರಣವೆಂಬ ಗುಪ್ತಾಚರ ವರದಿ ಅಧಿಕಾರಿಗಳಿಗೆ ಸಿಕ್ಕಿತು, ಕ್ರಿಸ್ತನು ಎಂಬದಕ್ಕೆ ಅವರು *Chrestus* ಎನ್ನುತ್ತಿದ್ದರೆಂದು ತೋರುತ್ತದೆ."[3] ಪೌಲನು ರೋಮಾಪುರದವರಿಗೆ ಪತ್ರಿಕೆಯನ್ನು ಬರೆಯುವ ಕ್ರಿ.ಶ. 50ರ ಹೊತ್ತಿಗೆ ಅಲ್ಲಿನ ಸಭೆಯು ಜೀವಂತ ಮತ್ತು ಕ್ರಿಯಾಶೀಲವಾಗಿತ್ತು (1:8).

## ಯೆಹೂದ್ಯರು ಮತ್ತು ಅನ್ಯಜನಾಂಗಗಳು

ಇಲ್ಲಿ ಚಿಂತಿಸಬೇಕಾದ ಒಂದು ಪ್ರಶ್ನೆಯೆಂದರೆ, ರೋಮಾಪುರದಲ್ಲಿದ್ದ ಸಭೆಯು ಮುಖ್ಯವಾಗಿ ಯೆಹೂದ್ಯರಿಂದ ಕೂಡಿತ್ತೋ ಅಥವಾ ಪ್ರಮುಖವಾಗಿ ಅನ್ಯಜನರಿದ್ದರೋ, ಅಥವಾ ಇವರಿಬ್ಬರನ್ನೊಳಗೊಂಡು ಇತ್ತೋ ಎಂಬುದು. ಪತ್ರಿಕೆಯಲ್ಲಿ, ಪೌಲನು ಆರಂಭದಲ್ಲಿ ಅನ್ಯಜನ ಎಂದು ಸಂಬೋಧಿಸುತ್ತಾನೆ: "ನನ್ನ ಕೆಲಸವು ಇತರ ಜನಗಳಲ್ಲಿ ಸಫಲವಾದಂತೆ ನಿಮ್ಮಲ್ಲಿಯೂ ಸಫಲವಾದೀತೆಂದು ನಿಮ್ಮ ಬಳಿಗೆ ಬರುವದಕ್ಕೆ

ಅನೇಕಾವರ್ತಿ ಮನಸ್ಸು ಮಾಡಿಕೊಂಡಿದ್ದಾಗ್ಯೂ . . ." (1:13; ನೋಡಿರಿ 15:15, 16). ಹೇಗೂ, ಇತರ ವಾಕ್ಯ ಭಾಗಗಳು ಯೆಹೂದ್ಯರನ್ನು ಕುರಿತಾಗಿರುತ್ತವೆ. ಉದಾಹರಣೆಗೆ, ಪೌಲನು ಬರೆದನು, "ನೀನು 'ಯೆಹೂದ್ಯ' ನೆನಿಸಿಕೊಂಡವನು" ಮತ್ತು ಬಳಿಕ ಸೇರಿಸಿ ಹೇಳಿದ್ದೇನೆಂದರೆ, "ನಿಮ್ಮ ದೆಸೆಯಿಂದ ಅನ್ಯಜನರಲ್ಲಿ ದೇವರ ನಾಮವು ದೂಷಣೆಗೆ" ಗುರಿಯಾಗುತ್ತದೆ (2:17, 24; ನೋಡಿರಿ 4:1). ಇಲ್ಲಿ ಸ್ಥಿತಿಯನ್ನು ಪೌಲನ ಮುಂದೆ ಎರಡು ವ್ಯಕ್ತಿಗಳು ನಿಂತಿರುವದಕ್ಕೆ ಹೋಲಿಸಬಹುದು. ಒಮ್ಮೆ ಆತನು ತನ್ನ ಹೇಳಿಕೆಗಳನ್ನು ಮೊದಲಿನವನಿಗೆ ನೀಡಿದರೆ, ಮತ್ತೊಮ್ಮೆ ಎರಡನೆಯವನಿಗೆ ಸಂಭೋದಿಸಿ ಹೇಳುತ್ತಾನೆ.

ಸಭೆಯಲ್ಲಿ ಅನ್ಯಜನರಿಗೂ ಯೆಹೂದ್ಯರಿಗೂ ಸೇರಿದ ಸದಸ್ಯರಿದ್ದರೆಂಬುದು ಗಮನಾರ್ಹವಾದದ್ದು, ಆದರೆ ಎಷ್ಟೆಷ್ಟು ಜನರಿದ್ದರು ಎಂಬುದು ಪ್ರಾಮುಖ್ಯವಲ್ಲ. ರೋಮಾಪುರದಲ್ಲಿದ್ದ ಸಭೆಯು ಯೆಹೂದ್ಯರಿಗಿಂತಲೂ ಅನ್ಯಜನರ ಸದಸ್ಯರನ್ನು ಹೆಚ್ಚಾಗಿ ಒಳಗೊಂಡಿರುವ ಸಾಧ್ಯತೆಯಿರುತ್ತದೆ. ಕ್ರಿ.ಶ. 49 ಅಥವಾ 50ರ ವೇಳೆ ಔಗುಸ್ತ ಚಕ್ರವರ್ತಿಯು ಯೆಹೂದ್ಯರನ್ನು ರೋಮ್ ನಿಂದ ಹೊರಹಾಕಿದ್ದನು (ನೋಡಿರಿ ಅಪೊಸ್ತಲರ ಕೃತ್ಯಗಳು 18:2). ಇದರಲ್ಲಿ ಬಹುಶಃ ಯೆಹೂದಿ ಕ್ರೈಸ್ತರು ಸಹ ಸೇರಿದ್ದರು-ಈ ಕಾರಣದಿಂದ ರೋಮಾಪುರದ ಸಭೆಯಲ್ಲಿ ಹೆಚ್ಚಾಗಿ ಅನ್ಯಜನರೇ ಉಳಿಯುವಂತಾಗಿತ್ತು. ಕ್ರಿ.ಶ. 54 ರಲ್ಲಿ ಔಗುಸ್ತನು ಮರಣಿಸಿದಾಗ, ನಿಷೇಧವು ತೆಗೆಯಲ್ಪಟ್ಟಿತು ಮತ್ತು ಹೊರಹಾಕಲ್ಪಟ್ಟಿದ್ದವರಲ್ಲಿ ಕೆಲವರು ಮರಳಿ ಬಂದರು (16:3); ಆದರೆ ಈ ವೇಳೆಗಾಗಲೇ, ಸಭೆಯಲ್ಲಿ ಅನ್ಯಜನರ ಪ್ರಾಬಲ್ಯತೆ ಹೆಚ್ಚಾಗಿದ್ದಿರಬಹುದು.

ಪೌಲನು ಪತ್ರಿಕೆಯ ಆರಂಭದಲ್ಲಿಯೇ ಅನ್ಯಜನರನ್ನು ಸಂಬೋಧಿಸುವದಕ್ಕೆ ಈ ತೀರ್ಮಾನವು ಒಪ್ಪಿಗೆಯಾಗುತ್ತದೆ (1:13). ಅಷ್ಟುಮಾತ್ರವಲ್ಲದೆ, 16:3-15 ರಲ್ಲಿ ಉಲ್ಲೇಖಿಸಲಾಗುವ ಇಪ್ಪತ್ತಾರು ಹೆಸರುಗಳಲ್ಲಿ ಏಕೆ ಕೆಲವೇ ಕೆಲವು ಮಾತ್ರ ಪ್ರತ್ಯೇಕವಾಗಿ ಯೆಹೂದಿ ಹೆಸರಿರುತ್ತವೆಂಬದನ್ನು ವಿವರಿಸುವದಕ್ಕೆ ಇದು ಸಹಾಯಕವಾಗುತ್ತದೆ.[4] ಅದರ ಜೊತೆಗೆ, ಅಪೊಸ್ತಲರ ಕೃತ್ಯಗಳು 28:17-22 ತೋರಿಸುವದೇನೆಂದರೆ ಪೌಲನು ಸೆರೆಮನೆಗೆ ಹಾಕಲ್ಪಡುವ ಮುಂಚೆಯೇ ರೋಮಾಪುರದಲ್ಲಿನ ಯೆಹೂದ್ಯರ ಮಧ್ಯದಲ್ಲಿ ಸುವಾರ್ತೆಸೇವೆಯು ಅಲ್ಪವಾಗಿತ್ತು.

## ರೋಮಾಪುರದ ಸಭೆಯೊಂದಿಗೆ ಪೌಲನ ಸಂಬಂಧ

ಕೆಲವರು ರೋಮಾಪುರದಲ್ಲಿನ ಸಭೆಯೊಂದಿಗೆ ಪೌಲನ ಸಂಬಂಧದ ವಿಷಯದಲ್ಲಿ ಗೊಂದಲಕ್ಕೊಳಗಾಗುತ್ತಾರೆ. ಕ್ಯಾಥೋಲಿಕರು ಆಶ್ಚರ್ಯಪಡುವದೇನೆಂದರೆ ಪೇತ್ರನು (ಅವರ ಪ್ರಥಮ ಪೋಪ್ ಎಂದು ನಂಬುತ್ತಾರೆ) ಅಲ್ಲಿರುವಾಗ (ಇವರು ಹೇಳಿಕೊಳ್ಳುವ ಪ್ರಕಾರ) ಪೌಲನಿಗೆ ಪತ್ರಿಕೆಯನ್ನು ಬರೆಯುವದಕ್ಕೆ ಯಾವ ಅಧಿಕಾರವಿತ್ತು. ಸಂದೇಹವಾದಿಗಳು ಹೀಗೆ ಕೇಳುತ್ತಾರೆ, "ಪೌಲನು ಯಾವದೇ ರೀತಿಯಲ್ಲಿ ಬೇರೆಯವರಿಗಿಂತ ಭಿನ್ನವಾಗಿಲ್ಲದಿದ್ದರೆ ಅವನಿಗೆ ಅಂಥ ಪತ್ರಿಕೆಯನ್ನು ಬರೆಯಲು ಏನು ಅಧಿಕಾರವಿತ್ತು?" ಆದರೆ ಸತ್ಯವೇದವನ್ನು ಅವರ ಅಧಿಕಾರವಾಗಿ ಸ್ವೀಕರಿಸುವವರು ರೋಮಾಪುರದಲ್ಲಿನ ಸಭೆಯೊಂದಿಗೆ ಪೌಲನಿಗಿದ್ದ ಸಂಬಂಧದ ಬಗ್ಗೆ ಯಾವ ಸಮಸ್ಯೆ ಹೊಂದಿಲ್ಲ. ಅನ್ಯಜನರಿಗೆ ಅಪೊಸ್ತಲನಾಗಿರುವಂತೆ ಪೌಲನಿಗೆ ಕ್ರಿಸ್ತನು ಆಜ್ಞಾಪಿಸಿದ್ದನು

(ಅಪೊಸ್ತಲರ ಕೃತ್ಯಗಳು 26:16-18; ಗಲಾತ್ಯ 2:7, 8). ಅವನ ಗಮನವು ಅನ್ಯಜನರ ಮೊಟ್ಟಮೊದಲ ನಗರದ ಕಡೆಗೆ ತಿರುಗಿಕೊಳ್ಳುವದಕ್ಕೆ ಹೆಚ್ಚು ಕಾಲ ಬೇಕಾಗಲಿಲ್ಲ (ನೋಡಿರಿ 1:5, 9-11).

# ಬರೆದ ಸ್ಥಳ ಮತ್ತು ದಿನಾಂಕ

## ಒಂದು ಕಾಲಾನುಕ್ರಮದ ಸಮೀಕ್ಷೆ

ಒಂದು ಕಲಾನುಕ್ರಮದ ಸಮೀಕ್ಷೆಯು ರೋಮಾಪುರದವರಿಗೆ ಬರೆದ ಪತ್ರಿಕೆಯು ಎಲ್ಲಿ ಮತ್ತು ಯಾವಾಗ ಬರೆಯಲ್ಪಟ್ಟಿತೆಂಬದನ್ನು ನಿಖರವಾಗಿ ಹೇಳಲು ಸಹಾಯವಾಗುವದು. ಸಮೀಕ್ಷೆಯು ಪೌಲನ ಮೂರನೆಯ ಸುವಾರ್ತಾ ಪ್ರಯಾಣದಿಂದ ಆರಂಭವಾಗತಕ್ಕದ್ದು. ಗಲಾತ್ಯ ಮತ್ತು ಫ್ರುಗ್ಯಕ್ಕೆ ಭೇಟಿಕೊಟ್ಟ ಬಳಿಕ, ಅವನು ಎಫೆಸಕ್ಕೆ ಬಂದನು (ಅಪೊಸ್ತಲರ ಕೃತ್ಯಗಳು 18:23; 19:1). ಅಲ್ಲಿರುವ ವೇಳೆ, ಆತನು ರೋಮಾಪುರಕ್ಕೆ ಹೋಗಲು ಸಂಕಲ್ಪಮಾಡಿದನು: "ಪೌಲನು ತಾನು . . . ಮಕೆದೋನ್ಯ ದಲ್ಲಿಯೂ ಆಖಾಯದಲ್ಲಿಯೂ ಸಂಚಾರಮಾಡಿ ಯೆರೂಸಲೇಮಿಗೆ ಹೋಗಬೇಕೆಂದು ಮನಸ್ಸಿನಲ್ಲಿ ಉದ್ದೇಶಿಸಿ, 'ಅಲ್ಲಿಗೆ ಹೋದ ಮೇಲೆ, ರೋಮಾಪುರವನ್ನು ಸಹ ನೋಡ ಬೇಕೆಂದು ಹೇಳಿದನು'" (ಅಪೊಸ್ತಲರ ಕೃತ್ಯಗಳು 19:21).

ಎಫೆಸದಲ್ಲಿ ಸಮಸ್ಯೆ ಉದ್ಭವವಾದಾಗ (ಅಪೊಸ್ತಲರ ಕೃತ್ಯಗಳು 19:23-41), ಪೌಲನು ಮಕೆದೋನ್ಯಕ್ಕೆ ಹೋದನು (ಅಪೊಸ್ತಲರ ಕೃತ್ಯಗಳು 20:1), ಆತನು ಅಲ್ಲಿ ಬೇಸಿಗೆ ಮತ್ತು ವಸಂತಕಾಲವನ್ನು ಕಳೆದನು. ಇದಾದ ಬಳಿಕ, ಚಳಿಗಾಲದ ವೇಳೆ ಮೂರು ತಿಂಗಳ ಕಾಲ ಆತನು ಗ್ರೀಕ್.ಗೆ—ನಿರ್ದಿಷ್ಟವಾಗಿ ಕೊರಿಂಥಕ್ಕೆ- ಹೋದನು (ನೋಡಿರಿ ಅಪೊಸ್ತಲರ ಕೃತ್ಯಗಳು 20:2, 3; 1 ಕೊರಿಂಥ 16:6). ಕೊರಿಂಥದಿಂದ, ಆತನು ಯೆರೂಸಲೇಮಿನಲ್ಲಿರುವ ಕ್ರೈಸ್ತರಿಗಾಗಿ ಕಾಣಿಕೆಗಳನ್ನು ತೆಗೆದುಕೊಂಡು ಅಲ್ಲಿಗೆ ಹೊರಟನು (ಅಪೊಸ್ತಲರ ಕೃತ್ಯಗಳು 20:3, 16; 24:17; ನೋಡಿರಿ 1 ಕೊರಿಂಥ 16:1-4).

## ಕೊರಿಂಥದಿಂದ-ಸುಮಾರು ಕ್ರಿ.ಶ. 57 ಅಥವಾ 58

ಪೌಲನು ರೋಮಾಪುರದವರಿಗೆ ಬರೆದ ಪತ್ರಿಕೆಯನ್ನು ತಾನು ಕೊರಿಂಥದಲ್ಲಿದ್ದ ಮೂರು ತಿಂಗಳ ವೇಳೆಯಲ್ಲಿ ಬರೆದನೆಂದು ಬಹುಪಾಲು ಲೇಖಕರು ಒಪ್ಪುತ್ತಾರೆ. ಅದರ ಜೊತೆಗೆ, ಆ ಲೇಖಕರು ಆತನು ಅಲ್ಲಿದ್ದ ಈ ಕಾಲವನ್ನು ಕ್ರಿ.ಶ. 57 ಅಥವಾ 58 ಎಂದು ಹೇಳುತ್ತಾರೆ. ರೋಮಾಪುರ ಪತ್ರಿಕೆಯು ಪೌಲನು ಕೊರಿಂಥದಲ್ಲಿದ್ದ ಆತನ ಭೇಟಿಯ ಅಂತ್ಯದ ವೇಳೆಯಲ್ಲಿ ಬರೆಯಲ್ಪಟ್ಟಿತೆಂಬ ತೀರ್ಮಾನವು 15:25-28 ರಲ್ಲಿ ನೀಡಿದ ಪೌಲನ ಯೋಜನೆಯ ಮುಖ್ಯಾಂಶಗಳೊಂದಿಗೆ ಒಪ್ಪುತ್ತದೆ:

> ಆದರೆ ಈಗ, ನಾನು ದೇವಜನರಿಗೆ ಒಂದು ಧರ್ಮಕಾರ್ಯವನ್ನು ಮಾಡು ವವನಾಗಿ ಯೆರೂಸಲೇಮಿಗೆ ಹೋಗುತ್ತೇನೆ. ಯಾಕಂದರೆ ಯೆರೂಸಲೇ ಮಿನಲ್ಲಿರುವ ದೇವ ಜನರೊಳಗೆ ಬಡವರಿಗೋಸ್ಕರ ಸ್ವಲ್ಪ ಹಣದ ಸಹಾ ಯವನ್ನು ಮಾಡಬೇಕೆಂಬದಾಗಿ ಮೆಕೆದೋನ್ಯ ಅಖಾಯ ಸೀಮೆಗಳವರು [ಅಖಾಯ ಸೀಮೆಯಲ್ಲಿ ಕೊರಿಂಥ ಪಟ್ಟಣ ಇದೆ]

ಇಷ್ಟಪಟ್ಟಿದ್ದಾರೆ. . . . ನಾನು ಈ ಕೆಲಸವನ್ನು ತೀರಿಸಿಕೊಂಡು, . . . ನಿಮ್ಮ ಮಾರ್ಗವಾಗಿ ಸ್ಪೇನ್ ದೇಶಕ್ಕೆ ಹೋಗುವೆನು.

ಪತ್ರಿಕೆಯ ಅಂತ್ಯದಲ್ಲಿ ಮೂವರು ವ್ಯಕ್ತಿಗಳನ್ನು ಉಲ್ಲೇಖಿಸಿರುವದು ಈ ತೀರ್ಮಾನವನ್ನು ಮತ್ತಷ್ಟು ಪುಷ್ಠಿಗೊಳಿಸುತ್ತದೆ. ಮೊದಲನೆಯವಳು ಫೊಯಿಬೆ, ಈಕೆಯು ಈ ಪತ್ರಿಕೆಯನ್ನು ರೋಮಾಪುರಕ್ಕೆ ಒಯ್ದಳು: "ನಾನು ನಿಮ್ಮ ಬಳಿಗೆ ಕಳುಹಿಸುವ ನಮ್ಮ ಸಹೋದರಿಯಾದ ಫೊಯಿಬೆಯನ್ನು ಪ್ರೀತಿಯಿಂದ ಅಂಗೀಕರಿಸಿರಿ. ಆಕೆಯು ಕೆಂಕ್ರೆಯ ಪಟ್ಟಣದಲ್ಲಿರುವ ಸಭೆಯ ಸೇವಕಳಾಗಿದ್ದಾಳೆ" (16:1). ಕೆಂಕ್ರೆಯು ಕೊರಿಂಥಕ್ಕೆ ಪೂರ್ವ ದಿಕ್ಕಿನಲ್ಲಿತ್ತು. ಇನ್ನಿಬ್ಬರು ವ್ಯಕ್ತಿಗಳ ಹೆಸರನ್ನು 16:23 ರಲ್ಲಿ ಉಲ್ಲೇಖಿಸಲಾಗಿದೆ: "ನನಗೂ ಸಮಸ್ತ ಸಭೆಗೂ ಅತಿಥಿಸತ್ಕಾರವನ್ನು ಮಾಡುತ್ತಿರುವ ಗಾಯನು ನಿಮ್ಮನ್ನು ವಂದಿಸುತ್ತಾನೆ. ಈ ಪಟ್ಟಣದ ಖಜಾನೆಯ ಮೇಲ್ವಿಚಾರಕನಾಗಿರುವ ಎರಸ್ತನೂ . . . ನಿಮಗೆ ವಂದನೆಗಳನ್ನು ಹೇಳುತ್ತಾರೆ." ಗಾಯನು ಎಂಬವನು ಕೊರಿಂಥದಲ್ಲಿ ಪೌಲನಿಂದ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದನು (1 ಕೊರಿಂಥ 1:14). 2 ತಿಮೊಥೆ 4:20ರಲ್ಲಿ, ಎರಸ್ತನೆಂಬ ಸಹೋದರನು ಕೊರಿಂಥದೊಂದಿಗೆ ಗುರುತಿಸಲ್ಪಟ್ಟಿದ್ದಾನೆ (ನೋಡಿರಿ ಅಪೊಸ್ತಲರ ಕೃತ್ಯಗಳು 19:22). ಅನಂತರದ ಚರ್ಚೆಯಲ್ಲಿ ಪ್ರಾಚೀನ ಕೊರಿಂಥದ ಅವಶೇಷಗಳಲ್ಲಿ ಸಿಕ್ಕ ಒಂದು ಬರಹವು ಎರಸ್ತನೆಂಬ ಆ ನಗರದ ಅಧಿಕಾರಿ ಬಗ್ಗೆ ಪ್ರಸ್ತಾಪಿಸುತ್ತದೆಂಬುದನ್ನು ಕುರಿತು ನೋಡುತ್ತೇವೆ (16:23ರ ಮೇಲಿನ ವ್ಯಾಖ್ಯಾನಗಳನ್ನು ನೋಡಿರಿ).

## ಕಾಲಾನುಕ್ರಮದ ಸಮೀಕ್ಷೆ ಮುಂದುವರೆಯುತ್ತದೆ

ಪೌಲನ ಪ್ರಯಾಣಗಳ ಬಗ್ಗೆ ಇನ್ನಷ್ಟು ಮುಂದಕ್ಕೆ ಹೋಗುವದಾದರೆ ರೋಮಾಪುರಕ್ಕೆ ಬರೆಯುವಾಗ ಅಪೊಸ್ತಲನ ಮನಸ್ಸಿನ ಆಲೋಚನೆಗಳ ಒಳನೋಟದ ಕುರಿತು ಹೆಚ್ಚು ತಿಳುವಳಿಕೆ ಸಿಕ್ಕುತ್ತದೆ. ಯೆರೂಸಲೇಮಿಗೆ ಪ್ರಯಾಣಿಸುವಾಗ, ಪೌಲನು ಎಫೆಸದಲ್ಲಿನ ಸಭೆಯ ಹಿರಿಯರನ್ನು ಭೇಟಿಯಾದನು (ಅಪೊಸ್ತಲರ ಕೃತ್ಯಗಳು 20:17, 18). ಅತನು ಅವರಿಗೆ ಹೇಳಿದ್ದೇನೆಂದರೆ,

> ಇಗೋ, ನಾನು . . . ಆತ್ಮನಿರ್ಬಂಧವುಳ್ಳವನಾಗಿ ಯೆರೂಸಲೇಮಿಗೆ ಹೋಗುತ್ತೇನೆ. ಅಲ್ಲಿ ನನಗೆ ಏನು ಸಂಭವಿಸುವದೋ ನಾನರಿಯೆ. ನಿನಗೆ ಬೇಡಿಗಳೂ ಸಂಕಟಗಳೂ ಕಾದುಕೊಂಡವೆ ಎಂದು ಪವಿತ್ರಾತ್ಮನು ಎಲ್ಲಾ ಪಟ್ಟಣಗಳಲ್ಲಿಯೂ ನನಗೆ ಖಂಡಿತವಾಗಿ ಹೇಳುತ್ತಾನೆ; ಇಷ್ಟು ಮಾತ್ರ ಬಲ್ಲೆನು. ಆದರೆ ಪ್ರಾಣವನ್ನು ಉಳಿಸಿಕೊಳ್ಳುವದೇ ವಿಶೇಷವೆಂದು ನಾನು ಎಣಿಸುವದಿಲ್ಲ . . . (ಅಪೊಸ್ತಲರ ಕೃತ್ಯಗಳು 20:22-24).

ಅಪೊಸ್ತಲರ ಕೃತ್ಯಗಳು 21 ರಲ್ಲಿ, ಪವಿತ್ರಾತ್ಮನು ". . . ಎಲ್ಲಾ ಪಟ್ಟಣಗಳಲ್ಲಿಯೂ ನನಗೆ ಖಂಡಿತವಾಗಿ ಹೇಳುತ್ತಾನೆ" (ಅಪೊಸ್ತಲರ ಕೃತ್ಯಗಳು 20:23) ಎಂಬ ಕಾರ್ಯ ಕಾಣುತ್ತದೆ. ಪೌಲನು ಕೈಸರೈಯನ್ನು ತಲುಪಿದಾಗ, ಯೂದಾಯದ ಒಬ್ಬ ಪ್ರವಾದಿಯು ತನ್ನ ಸ್ವಂತ ಕೈಗಳನ್ನೇ ಪೌಲನ ನಡುಕಟ್ಟಿನಿಂದ ಕಟ್ಟಿಕೊಂಡು, "ಈ ನಡುಕಟ್ಟು ಯಾವನದೋ ಆ ಮನುಷ್ಯನನ್ನು ಯೆಹೂದ್ಯರು ಇದೇ ರೀತಿಯಾಗಿ ಯೆರೂಸಲೇಮಿನಲ್ಲಿ

ಕಟ್ಟಿ ಅನ್ಯಜನರ ಕೈಗೆ ಒಪ್ಪಿಸಿಕೊಡುವರು, ಹೀಗೆ ಪವಿತ್ರಾತ್ಮನು ಹೇಳುತ್ತಾನೆಂಬುದಾಗಿ ಹೇಳಿದನು" (ಅಪೊಸ್ತಲರ ಕೃತ್ಯಗಳು 21:11). ಅಲ್ಲಿದ್ದವರು ಪೌಲನನ್ನು ಯೆರೂಸಲೇ ಮಿಗೆ ಹೋಗಬೇಡವೆಂದು ಬೇಡಿಕೊಂಡರು, ಆದರೆ ಪೌಲನು ಉತ್ತರಿಸಿದ್ದೇನೆಂದರೆ, "ಕರ್ತನಾದ ಯೇಸುವಿನ ಹೆಸರಿನ ನಿಮಿತ್ತವಾಗಿ ಯೆರೂಸಲೇಮಿನಲ್ಲಿ ಬೇಡೀ ಹಾಕಿಸಿಕೊ ಳ್ಳುವದಕ್ಕೆ ಮಾತ್ರವಲ್ಲದೆ ಸಾಯುವದಕ್ಕೂ ಸಿದ್ಧವಾಗಿದ್ದೇನೆ ಅಂದನು" (ಅಪೊಸ್ತಲರ ಕೃತ್ಯಗಳು 21:12, 13). ಈ ವಾಕ್ಯಭಾಗಗಳನ್ನು ಒಬ್ಬನು ಓದುವಾಗ, ಪೌಲನು ರೋಮಾಪುರಕ್ಕೆ ಸೇರುವದು ಅಸಾಧ್ಯವೆಂದು ಕೊಂಡನು ಎಂಬ ಅನಿಸಿಕೆ ಬರುತ್ತದೆ. ರೋಮಾಪುರ 15 ರಲ್ಲಿ, ಸ್ಪೇನಿಗೆ ಹೋಗುವ ದಾರಿಯಲ್ಲಿ ರೋಮಾಪುರಕ್ಕೆ ಬಂದು ಹೋಗುವ ಇಚ್ಛೆಯನ್ನು ವ್ಯಕ್ತಪಡಿಸಿದನು, ಆದರೆ ಈ ಪತ್ರಿಕೆ ಬರೆಯುವ ಪೌಲನ ಉದ್ದೇಶದ ಹತ್ತಿರಕ್ಕೆ ಒಬ್ಬನು ಬರುತ್ತಿದ್ದ ಹಾಗೆ ಆತನ ಸಂಕಲ್ಪವು ಕೈಗೂಡದಿರುವ ಸಾಧ್ಯತೆಯಿತ್ತೆಂಬದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು.

ಯೆರೂಸಲೇಮಿನಲ್ಲಿ ಪೌಲನು ಬಂಧಿಯಾಗಿ ಮಾಡಲ್ಪಟ್ಟ ಮೇಲೆ (ಅಪೊಸ್ತಲರ ಕೃತ್ಯಗಳು 21:33), ಕರ್ತನು ಅವನಿಗೆ ಕಾಣಿಸಿಕೊಂಡು ಹೇಳಿದ್ದೇನೆಂದರೆ, "ಧೈರ್ಯದಿಂದಿರು ;ನೀನು ಯೆರೂಸಲೇಮಿನಲ್ಲಿ ನನ್ನ ಸಂಗತಿಯನ್ನೆಲ್ಲಾ ಸಾಕ್ಷಿಯಾಗಿ ಹೇಳಿದಂತೆಯೇ ರೋಮಾಪುರದಲ್ಲಿಯೂ ಸಾಕ್ಷಿಹೇಳಬೇಕಾಗುವದು ಅಂದನು" (ಅಪೊಸ್ತಲರ ಕೃತ್ಯಗಳು 23:11). ಪೌಲನಿಗೆ ರೋಮಾಪುರಕ್ಕೆ ಹೋಗುವ ತನ್ನ ಕನಸು ಕ್ರಮೇಣ ನನಸಾಗುವದು ಎಂಬ ಬಗ್ಗೆ ಆತನಿಗೆ ದೊರೆತ ಮೊದಲ ಭರವಸೆ ಇದಾಗಿರುವದಾಗಿದೆ. ಕೆಲವು ವರ್ಷಗಳ ನಂತರ ಪೌಲನು ಕೊನೆಗೂ ರೋಮಾಪುರಕ್ಕೆ ಬಂದು ಸೇರಿದನು (ಅಪೊಸ್ತಲರ ಕೃತ್ಯಗಳು 28:16)—ತಾನು ಸಂಕಲ್ಪಮಾಡಿದ್ದ ಹಾಗೆ ಒಬ್ಬ ಸುವಾರ್ತಿಕನಾಗಿ ಅಲ್ಲ, ಆದರೆ ತನ್ನ ಪ್ರಾಣಕ್ಕಾಗಿ ವಿಚಾರಣಾ ಕೈದಿಯಾಗಿ ಬಂದಿದ್ದನು. ಆತನನ್ನು ಸರ್ಕಾರದ ಖರ್ಚಿನಲ್ಲಿಯೇ ಹಡಗಿನಲ್ಲಿ ರೋಮಾಪುರಕ್ಕೆ ಕರೆದೊಯ್ಯಲಾಗಿತ್ತು.

## ಶೈಲಿ

ರೋಮಾಪುರದವರಿಗೆ ಬರೆದ ಪತ್ರಿಕೆ ಒಂದು ಪತ್ರಿಕೆಯೆಂಬುದು ನಿಜ, ಆದರೆ ಒಂದು ಸಾಮಾನ್ಯ ಪತ್ರಿಕೆಯಲ್ಲ. ಇದನ್ನು ಒಂದು ಶಾಸ್ತ್ರಗ್ರಂಥ ಅಥವಾ ಶಾಸ್ತ್ರಗ್ರಂಥದ ಒಂದು ಸುರಳಿ ಎಂದು ಭಾವಿಸಬಹುದು. ಇದೊಂದು ಪತ್ರಿಕೆ, ಯಾಕೆಂದರೆ ಇದು ಆ ದಿನಗಳಲ್ಲಿದ್ದ ಪತ್ರ ವ್ಯವಹಾರದ ರೂಪದಲ್ಲಿರುತ್ತದೆ-ವಂದನೆಗಳ ಅರ್ಪಣೆ (1:1-7) ಮತ್ತು ಅಂತಿಮ ವಂದನೆಗಳೊಂದಿಗೆ (16:1-24). ತೆರ್ತ್ಯನು, ಪೌಲನಿಗೆ ಲೇಖಕನಾಗಿದ್ದನು, ಆತನು ಇದನ್ನು ಒಂದು "ಪತ್ರಿಕೆ" ಎಂದು ಗುರುತಿಸಿದ್ದಾನೆ (16:22). ಇದು ಒಂದು ಪ್ರಕರಣ ಶಾಸ್ತ್ರ ಸಹ ಆಗಿದೆ, ಒಂದು ವಿಷಯದ ಬಗ್ಗೆ ಅಧಿಕೃತವಾದ ವ್ಯವಸ್ಥಿಕರಣೆಯನ್ನು ಹೊಂದಿರುತ್ತದೆ.

# ಹೊಸ ಒಡಂಬಡಿಕೆಯಲ್ಲಿ ಇದರ ಸ್ಥಾನ

## ಇದು ಏಕೆ ಪೌಲನ ಬರಹಗಳಲ್ಲಿ ಮೊದಲನೆಯ ಸ್ಥಾನವನ್ನು ಪಡೆದಿದೆ?

ರೋಮಾಪುರದವರಿಗೆ ಬರೆದ ಪತ್ರಿಕೆ ಏಕೆ ಅಪೊಸ್ತಲರ ಕೃತ್ಯಗಳ ಪುಸ್ತಕವಾದ ತಕ್ಷಣವೇ, ಪೌಲನ ಬರಹಗಳಲ್ಲಿ ಮೊದಲ ಸ್ಥಾನದಲ್ಲಿರಿಸಲ್ಪಟ್ಟಿದೆ? ರೋಮಾಪುರದವರಿಗೆ ಬರೆದ ಪತ್ರಿಕೆಯು ಪೌಲನು ಬರೆದ ಮೊದಲ ಪತ್ರಿಕೆಯಲ್ಲ. ಅದಕ್ಕೆ ಮುಂಚೆ ಆತನು 1 ಮತ್ತು 2 ಥೆಸಲೋನಿಕ, 1 ಮತ್ತು 2 ಕೊರಿಂಥ, ಮತ್ತು ಗಲಾತ್ಯ ಪತ್ರಿಕೆಗಳನ್ನು ಬರೆದನು. ರೋಮಾಪುರದವರಿಗೆ ಬರೆದ ಪತ್ರಿಕೆ ಆರನೆಯ ಪತ್ರಿಕೆಯಾಗಿದೆ–ಕನಿಷ್ಠ ಆತನ ಆರನೆಯ ಪತ್ರಿಕೆಯನ್ನಾದರೂ ನಮಗಾಗಿ ಸಂರಕ್ಷಿಸಿಡಲಾಗಿದೆಯಲ್ಲಾ. ಹಾಗಾದರೆ ಏಕೆ ಅದು ಮೊದಲ ಸ್ಥಾನದಲ್ಲಿ ಸೇರಿಸಲ್ಪಟ್ಟಿತು? ಕೆಲವರು ನಂಬುವದೇನೆಂದರೆ ರೋಮಾಪುರ ಪತ್ರಿಕೆ ಆತನ ಪತ್ರಿಕೆಗಳಲ್ಲಿಯೇ ಅತಿ ದೀರ್ಘವಾದ ಪತ್ರಿಕೆಯಾಗಿದೆ.[5] ಆದ್ದರಿಂದ ಮೊದಲ ಸ್ಥಾನದಲ್ಲಿಡಲಾಗಿದೆ, ಆದರೆ ಉದ್ದವಾಗಿರುವದು ಪ್ರಮುಖ ಕಾರಣವಲ್ಲ. ರೋಮಾಪುರ ಪತ್ರಿಕೆಯು ಪೌಲನ ಅತ್ಯುತ್ತಮ ರಚನೆ ಎಂದು ಸರ್ವರಿಂದಲೂ ಒಪ್ಪಲ್ಪಟ್ಟಿದೆ. ಈ ಪತ್ರಿಕೆಯನ್ನು ಬರೆಯುವಾಗ ಅಪೊಸ್ತಲನು ತನ್ನ ಬುದ್ಧಿಯ ಮತ್ತು ಆತ್ಮೀಕ ಸಾಮರ್ಥ್ಯಗಳ ಉತ್ತುಂಗದಲ್ಲಿದ್ದನು, ರೋಮಾಪುರ ಪತ್ರಿಕೆಯಲ್ಲಿ ಚರ್ಚಿಸಲಾದ ವಿಷಯಗಳ ಬಗ್ಗೆ ಬರೆಯುವದಕ್ಕೆ (ಆತ್ಮನ ನಡಿಸುವಿಕೆಯಡಿಯಲ್ಲಿ) ಸಿದ್ಧನಾಗಿದ್ದನು.

ರೋಮಾಪುರ ಪತ್ರಿಕೆಯು ತಾರ್ಕಿಕವಾಗಿ ಅಪೊಸ್ತಲರ ಕೃತ್ಯವನ್ನು ಅನುಸರಿಸುತ್ತದೆ. Dave Miller ಹೀಗೆ ಬರೆದನು: "ಅಪೊಸ್ತಲರ ಕೃತ್ಯಗಳು ರಕ್ಷಣೆಯ ಸ್ಥಿತಿಗಳನ್ನು ತಿಳಿಸಿದರೆ; ರೋಮಾಪುರ ಪತ್ರಿಕೆಯು ರಕ್ಷಣೆಗೆ ಆಧಾರಗಳನ್ನು ನೀಡುತ್ತದೆ. ರೋಮಾಪುರ ಪತ್ರಿಕೆ ನಿರ್ದಿಷ್ಟವಾಗಿ ಏನು ಮಾಡಬೇಕೆಂದು ಹೇಳುವದಿಲ್ಲ. ಅಪೊಸ್ತಲರ ಕೃತ್ಯಗಳು ನಿಮಗೆ 'ಏನು' ಎಂಬದನ್ನು ತಿಳಿಸುತ್ತದೆ; ರೋಮಾಪುರ ಪತ್ರಿಕೆ 'ಹೇಗೆ' ಮತ್ತು 'ಏಕೆ' ಎಂಬದನ್ನು ತಿಳಿಸುತ್ತದೆ."[6]

## ಇದು ಕ್ರೈಸ್ತ ಶಾಸ್ತ್ರ ಸಂಗ್ರಹದ ("canon") ಗ್ರಂಥದಲ್ಲಿ ಸೇರಿರುತ್ತದೋ

"Canon" ಎಂಬುದು ಲ್ಯಾಟಿನ್.ನ *canon* ಎಂಬ ಪದದಿಂದ ಬಂದದ್ದು, ಅದರರ್ಥ "ನೇಮ," ಇದು ಗ್ರೀಕ್.ನ κανών (*kanōn*) ಎಂಬದರಿಂದ ಆರಿಸಿಕೊಳ್ಳಲ್ಪಟ್ಟಿದೆ, ಅದು "ಅಳತೆದಂಡ ಅಥವಾ ನೇಮ" ಎಂದು ಸೂಚಿಸುತ್ತದೆ. ವಾಕ್ಯಗಳ "canon" ಎಂಬುದು "ಅಳತೆದಂಡಕ್ಕೊಳಪಟ್ಟ," "ಪರೀಕ್ಷೆಯಲ್ಲಿ ತೇರ್ಗಡೆಯಾದ" ಮತ್ತು ದೇವರ ಲಿಖಿತ ವಾಕ್ಯದ ಪ್ರಾಮಾಣಿಕೃತ ಭಾಗವೆಂದು ಪರಿಗಣಿಸಲ್ಪಟ್ಟಿರುವ ಪುಸ್ತಕಗಳನ್ನು ಸೂಚಿಸುತ್ತದೆ. ರೋಮಾಪುರ ಪತ್ರಿಕೆಯು ಹೊಸ ಒಡಂಬಡಿಕೆಯಲ್ಲಿರುವ ಹಕ್ಕನ್ನು ಹೊಂದಿದೆಯೋ? ಪುನಃ, ಇದಕ್ಕೆ ಒಮ್ಮತವಿರುತ್ತದೆ. ರೋಮಾಪುರ ಪತ್ರಿಕೆಯು (ಆ ಹೆಸರಿನೊಂದಿಗೆ) ಯಾವಾಗಲೂ ಶಾಸ್ತ್ರ ಗ್ರಂಥಗಳಲ್ಲಿ ಪ್ರಶ್ನಿಸಲಾಗದಂಥ ಸ್ಥಾನವನ್ನು ಹೊಂದಿರುತ್ತದೆ. ಪ್ರಾಚೀನ, ಪ್ರೇರಣೆ ಹೊಂದದ ಕ್ರೈಸ್ತ ಲೇಖಕರ ಬರಹಗಳು ಕ್ರಿ.ಶ. 90 ರಷ್ಟು ಮುಂಚೆಯೇ ಪೌಲನ ಪತ್ರಿಕೆಗಳು ಒಟ್ಟಾಗಿ ವಿತರಿಸಲ್ಪಡುತ್ತಿದ್ದವೆಂಬದನ್ನು

ತೋರ್ಪಡಿಸುತ್ತವೆ.

### ಪ್ರಸ್ತುತ ಮೂಲಗ್ರಂಥ ಭಾಗ ಪ್ರಾಮಾಣಿಕವಾದದ್ದೋ?

ರೋಮಾಪುರ ಪತ್ರಿಕೆ ಕುರಿತಾಗಿ ಮೂಲಗ್ರಂಥಕ್ಕೆ ಸಂಬಂಧಿಸಿದ ಹಲವಾರು ಪ್ರಶ್ನೆಗಳು ಉದ್ಭವವಾಗುತ್ತವೆ. ಉದಾಹರಣೆಗೆ, ರೋಮಾಪುರ ಪತ್ರಿಕೆಯ ಕೆಲವೊಂದು ಪ್ರಾಚೀನ ಪ್ರತಿಗಳಲ್ಲಿ "ರೋಮ್" ಎಂಬ ಪದವು 1ನೇ ಅಧ್ಯಾಯದಲ್ಲಿ ಇರುವದಿಲ್ಲ, ಮತ್ತು ಕೆಲವೊಂದರಲ್ಲಿ ಮುಕ್ತಾಯದ ಅಧ್ಯಾಯಗಳು ಕಾಣೆಯಾಗಿರುತ್ತವೆ. ಇದು ವ್ಯಕ್ತಿಗತವಾದ ಉಲ್ಲೇಖವಿಲ್ಲದೆ ಅನೇಕ ಪ್ರಾಂತ್ಯಗಳಲ್ಲಿ ವಿತರಿಸಲ್ಪಟ್ಟಿರುವ ಪತ್ರಿಕೆಯೆಂದು ತೋರಿಸುತ್ತದೆ ಆದಾಗ್ಯೂ ವಿದ್ವಾಂಸರು ಒಪ್ಪುವದೇನೆಂದರೆ, ಹೊಸ ಒಡಂಬಡಿಕೆಯಲ್ಲಿರುವ ಹದಿನಾರು ಅಧ್ಯಾಯಗಳು "ಗಣನೀಯವಾಗಿ ಪೌಲನು ರೋಮಾಪುರ ಕ್ರೈಸ್ತರಿಗೆ ಬರೆದ ಮೂಲ ಗ್ರಂಥವಾಗಿರುತ್ತದೆ."[7]

## ಉದ್ದೇಶ

ಪೌಲನು ಈ ಪತ್ರಿಕೆಯನ್ನು ಬರೆಯುವದಕ್ಕೆ ಕನಿಷ್ಠ ಮೂರು ಕಾರಣಗಳನ್ನು ಪ್ರಸ್ತಾಪಿಸುತ್ತಾನೆ:

ವೈಯಕ್ತಿಕ ಕಾರಣ: ಆತನು ಬರುವದನ್ನು ಘೋಷಿಸುವದಕ್ಕೆ (1:11, 15).
ದೈವಶಾಸ್ತ್ರೀಕ ಕಾರಣ: ಸುವಾರ್ತೆಯ ಪ್ರಾಥಮಿಕ ತತ್ವಗಳನ್ನು ಸ್ಪಷ್ಟಪಡಿಸುವದಕ್ಕೆ (15:15).
ಆರ್ಥಿಕ ಕಾರಣ: ಸ್ಪೇನಿಗೆ ಮಾಡಬೇಕೆಂದಿದ್ದ ಪ್ರಯಾಣಕ್ಕೆ ಬೆಂಬಲವನ್ನು ಪಡೆದುಕೊಳ್ಳಲು (15:22-24, 28).

ಸಂಶಯವಿಲ್ಲದೆ, ಪತ್ರಿಕೆಯನ್ನು ಹೊರತರುವದರಲ್ಲಿ ಅನೇಕ ಅಂಶಗಳು ಸೇರಿದ್ದವು- ಆದರೆ ನಮ್ಮ ಆಸಕ್ತಿ ಪತ್ರಿಕೆಯ ಪ್ರಾಥಮಿಕ ಉದ್ದೇಶದ ಬಗ್ಗೆಯಾಗಿದೆ.

ಮೊದಲು, ರೋಮಾಪುರ ಪತ್ರಿಕೆಯನ್ನು ಪ್ರಾಥಮಿಕವಾಗಿ ಗಲಾತ್ಯದವರಿಗೆ ಬರೆದ ಪತ್ರಿಕೆಯಂತೆ ಯೆಹೂದಿಕರಣ ಗೊಳಿಸುತ್ತಿದ್ದ ಉಪದೇಶಕರ ಆರೋಪಗಳಿಂದ ತನ್ನನ್ನು ಕಾಪಾಡಿಕೊಳ್ಳುವದಕ್ಕಾಗಿ ಪೌಲನು ಬರೆಯಲಿಲ್ಲ. ಬಹುಶಃ ಪೌಲನು ಶೀಘ್ರದಲ್ಲಿ ಬರಲಿದ್ದ ಆ ಸುಳ್ಳು ಬೋಧಕರ ವಿರುದ್ಧವಾಗಿ ರೋಮಾಪುರದಲ್ಲಿದ್ದ ಕ್ರೈಸ್ತರನ್ನು ಸಿದ್ಧಗೊಳಿಸುವದಕ್ಕೆ ಇಚ್ಚೆಸಿದ್ದೀರಬಹುದು, ಆದರೆ ಅವರು ಈಗಾಗಲೇ ರೋಮಾಪುರಕ್ಕೆ ತಲುಪಿದ್ದರು ಎಂಬದಕ್ಕೆ ಯಾವ ಸುಳಿವುಗಳು ಕಾಣಿಸುವದಿಲ್ಲ.

ಅಲ್ಲದೆ, ರೋಮಾಪುರ ಪತ್ರಿಕೆ ಒಂದು ಸರಳವಾದ "ಮೊದಲ ಸೂತ್ರಗಳ"[8] ಸಂದೇಶವಲ್ಲ ಎಂಬದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ರೋಮಾಪುರದಲ್ಲಿನ ಕ್ರೈಸ್ತರ ನಂಬಿಕೆಯು ಜಗತ್ತಿಗೆಲ್ಲಾ ಪರಿಚಿತವಾಗಿತ್ತು (1:8). ಅವರು "ಸಕಲ ಜ್ಞಾನದಿಂದ ತುಂಬಿದವರಾಗಿಯೂ ಒಬ್ಬರಿಗೊಬ್ಬರು ಬುದ್ಧಿಹೇಳುವದಕ್ಕೆ ಶಕ್ತರಾಗಿದ್ದರು" (15:14). ಅವರಿಗಿದ್ದ ಅವಶ್ಯಕತೆಯು ವಾಕ್ಯದ "ಹಾಲು" ಆಗಿರಲಿಲ್ಲ (ಇದು ಸುಲಭವಾಗಿ

ಜೀರ್ಣವಾಗುವಂತದ್ದು), ಆದರೆ "ಗಟ್ಟಿಯಾದ ಆಹಾರ" ಆಗಿತ್ತು (ಇದು ಸುಲಭವಾಗಿ ಜೀರ್ಣಿಸಿಕೊಳ್ಳಲಾಗದ್ದು) (ನೋಡಿರಿ ಇಬ್ರಿಯ 5:12). ಒಂದು ವೇಳೆ, ಹೊಸ ಒಡಂಬಡಿಕೆಯ ಯಾವದಾದರೂ ಪುಸ್ತಕ "ಗಟ್ಟಿಯಾದ ಆಹಾರ" ಕ್ಕೆ ಯೋಗ್ಯವಾಗಿದ್ದರೆ, ಅದು ರೋಮಾಪುರ ಪತ್ರಿಕೆ. Charles Swindoll ಇದನ್ನು "ಇದು ಆತ್ಮಕ್ಕೆ ಹಗುರವಾದ ತಿಂಡಿಯಲ್ಲ," ಅದರ ಬದಲಾಗಿ ಇದು "ಪೂರ್ಣ ಪ್ರಮಾಣದ ಊಟ" ಆಗಿರುತ್ತದೆಂದು ಹೇಳುತ್ತಾರೆ.[9]

ಅಷ್ಟುಮಾತ್ರವಲ್ಲದೆ, ಪೌಲನ ಇತರ ಪತ್ರಿಕೆಗಳ ಹಾಗೆ ಈ ಪತ್ರಿಕೆಯು ಆಂತರಿಕ ಸಮಸ್ಯೆಗಳನ್ನು ಬಗೆಹರಿಸುವದಕ್ಕೆ ಬರೆಯಲ್ಪಟ್ಟಿಲ್ಲ. ರೋಮಾಪುರದಲ್ಲಿನ ಸಭೆಯಲ್ಲಿ ಯೆಹೂದ್ಯರ ಹಾಗೂ ಅನ್ಯಜನರ ಮಧ್ಯದಲ್ಲಿ ಕರ್ಷಣಗಳು ಇದ್ದಿರಬಹುದಾಗಿದೆ. ಹಾಗೆ ಇದ್ದದ್ದೇ ಆಗಿದ್ದರೆ ಪೌಲನು ತರ್ಕಮಾಡುವ ವಿಧವು ಆ ಕರ್ಷಣೆಯನ್ನು ಕಡಿಮೆಗೊಳಿಸುವಲ್ಲಿ ಸಹಾಯಕವಾಗಿರಬಹುದಾಗಿದೆ- ಆದರೆ ಆ ಸಮಸ್ಯೆಯ ಬಗ್ಗೆ ಕ್ರಮ ಕೈಕೊಳ್ಳುವದು ಆತನ ಪ್ರಾಥಮಿಕ ಉದ್ದೇಶವಾಗಿರಲಿಲ್ಲ.

ಅಂತಿಮವಾಗಿ, ಈ ಪತ್ರಿಕೆಯ ಪ್ರಾಥಮಿಕ ಉದ್ದೇಶವು (ಕೆಲವು ಲೇಖಕರು ತೀರ್ಮಾನಕ್ಕೆ ಬಂದ ಹಾಗೆ) ಪೌಲನು ಸ್ಪೇನಿಗೆ ಮಾಡಬೇಕೆಂದಿದ್ದ ಪ್ರಯಾಣಕ್ಕಾಗಿ ಬೆಂಬಲವನ್ನು ಪಡೆದುಕೊಳ್ಳುವದು ಆಗಿರಲಿಲ್ಲ. ರೋಮಾಪುರದಲ್ಲಿನ ಸಭೆ ಅವನಿಗೆ ಸಹಾಯ ಮಾಡುವದೆಂದು ಪೌಲನು ನಿರೀಕ್ಷೆ ಪಟ್ಟದ್ದು ನಿಜ (15:24). ಹೇಗೂ, ಆತನ ಉದ್ದೇಶವೆಲ್ಲಾ ಈ ಪತ್ರಿಕೆಯ ಮೂಲಕ ಆರ್ಥಿಕ ಸಹಾಯವನ್ನು ಮಾತ್ರವೇ ಪಡೆಯುವದಾಗಿದ್ದಲ್ಲಿ, ಅದನ್ನು ಈಗಾಗಲೇ ಆತನ ಮತ್ತು ಆತನ ಸೇವೆಯ ಪರಿಚಯವಿರುವ ಸಭೆಗಳಿಂದ ಪಡೆದುಕೊಳ್ಳುವ ಸಾಧ್ಯತೆ ಅಧಿಕವಾಗಿತ್ತು.

ಹಾಗಾದರೆ ಪೌಲನು ಈ ಪತ್ರಿಕೆಯನ್ನು ಬರೆಯುವದರಲ್ಲಿನ ಉದ್ಧೇಶವಾದರೂ ಏನಾಗಿತ್ತು? ರೋಮಾಪುರ ಪತ್ರಿಕೆಯು ಒಂದು *ಉಪದೇಶದ* ದಾಸ್ತಾವೇಜು ಆಗಿದೆ. ರೋಮಾಪುರದಲ್ಲಿನ ಕ್ರೈಸ್ತರು "ಸ್ಥಿರಗೊಳ್ಳುವದನ್ನು" ಕಾಣುವ ಹಾಗೆ ಅವರನ್ನು ಸಂಧಿಸಬೇಕೆಂದು ಹಂಬಲಿಸಿದನು (1:11). ಆತನು ಅವರನ್ನು "ಸ್ಥಿರಗೊಳಿಸುವ" ಅಥವಾ ಬಲಗೊಳಿಸುವ ಒಂದು ದಾರಿಯೆಂದರೆ, ಉಪದೇಶದ ಮೂಲಕವಾಗಿ (ನೋಡಿರಿ 16:25, 26; ಮತ್ತಾಯ 28:20; ಅಪೊಸ್ತಲರ ಕೃತ್ಯಗಳು 18:23). ಆತನು ಎಂದಾದರೂ (ಈ ಮುಂಚೆ ತಿಳಿಸಿದ ಹಾಗೆ) ರೋಮಾಪುರ ತಲುಪುತ್ತಾನೆಂಬದು ಬಹಳ ಅಸಂಭವನೀಯವಾಗಿದ್ದದರಿಂದ, ಆ ಉದ್ದೇಶವನ್ನು ನೆರವೇರಿಸುವದಕ್ಕಾಗಿ ಆತನು ಒಂದು ಪತ್ರಿಕೆಯನ್ನು ಕಳುಹಿಸಿಕೊಟ್ಟನು. Merrill C. Tenney ಹೀಗೆ ಬರೆಯುತ್ತಾರೆ:

> ಕೊರಿಂಥದವರಿಗೆ ಬರೆದ ಪತ್ರಿಕೆಯಂತೆ, ರೋಮಾಪುರದವರಿಗೆ ಬರೆದ ಪತ್ರಿಕೆ . . . ಸತ್ಯದ ಉಪದೇಶದ ವಿಷಯದಲ್ಲಿನ ತಪ್ಪುಗಳನ್ನು ತಿದ್ದುವ ದಕ್ಕೆ ಸಮರ್ಪಿತವಾಗಿಲ್ಲ. ಇದು ಎಲ್ಲಾ ಕ್ರೈಸ್ತವಿಚಾರದ ಕ್ಷೇತ್ರಗಳನ್ನು ಒಳ ಗೊಂಡಿಲ್ಲವಾದರೂ—ಅಂತ್ಯಕಾಲಶಾಸ್ತ್ರ ["ಕಡೇ ಸಂಗತಿಗಳ" - ಅಧ್ಯ ಯನ] ಇದರಲ್ಲಿ ಕಂಡುಬರುವದಿಲ್ಲ[10]—ಇದು ಎಫೆಸ ಪತ್ರಿಕೆಯನ್ನು ಹೊರ ತುಪಡಿಸಿ, ಬೇರೆ ಯಾವದೇ ಪೌಲನ ಪತ್ರಿಕೆಗಳಿಗಿಂತಲೂ ಕ್ರೈಸ್ತತ್ವದ ಹೃದಯದ ಕುರಿತ ವ್ಯವಸ್ಥಿತವಾದ ವಿವರವನ್ನು ಒದಗಿಸುತ್ತದೆ. ಪೌಲನ ಬಹು ಪಾಲು ಪತ್ರಿಕೆಗಳು ವಿವಾದಾತ್ಮಕವಾಗಿರುತ್ತವೆ ಅಥವಾ ತಿದ್ದುವಿ ಕೆಯ ಸ್ವಭಾವ

ಹೊಂದಿರುತ್ತವೆ; ರೋಮಾಪುರದವರಿಗೆ ಬರೆದ ಪತ್ರಿಕೆ ಪ್ರಮುಖವಾಗಿ ಒಂದು [ಉಪದೇಶಾತ್ಮಕ] ಪತ್ರಿಕೆಯಾಗಿದೆ.[11]

Moses E. Lard ತೀರ್ಮಾನಕ್ಕೆ ಬಂದದ್ದೇನೆಂದರೆ, ಉದ್ದೇಶದ ಪ್ರಶ್ನೆಗೆ "ಪತ್ರಿಕೆಯಲ್ಲಿನ ವಿಷಯಗಳು ಉತ್ತಮವಾಗಿ ಉತ್ತರಿಸುತ್ತವೆ. ಯಾವ ಪ್ರಭಾವವನ್ನು ಬೀರಬೇಕೆಂದು ಈ ವಿಷಯಗಳನ್ನು ರೂಪಿಸಿದ್ದಾಗ್ಯೂ, ಅದೇ ಉದ್ದೇಶಕ್ಕಾಗಿಯೇ ಪತ್ರಿಕೆಯು ಬರೆಯಲ್ಪಟ್ಟಿತು."[12] J. D. Thomas ಈ ಪುಸ್ತಕವನ್ನು "ಎಲ್ಲಾ ಯುಗಗಳಿಗೆ ಪ್ರಾಥಮಿಕ ಕ್ರೈಸ್ತತ್ವ" ದ ರೂಪರೇಖೆ ಎಂದು ಕಾಣುತ್ತಾರೆ.[13]

ಒಬ್ಬನು ರೋಮಾಪುರದ ಪ್ರಾಮುಖ್ಯತೆಯನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಇನ್ನೊಂದೆಡೆಯಲ್ಲಿ, ಪೌಲನು ಆ ಪಟ್ಟಣವನ್ನು ತಲುಪಿದ್ದಲ್ಲಿ, ಬಹುಶಃ ಅದನ್ನು ಸುವಾರ್ತಿಕ ಕೇಂದ್ರವನ್ನಾಗಿ ಮಾಡಿ ಅಲ್ಲಿಂದ ಆತನು ಮತ್ತು ಜೊತೆ ಸೇವಕರು ಸೇರಿಕೊಂಡು ರೋಮ್ ಸಾಮ್ರಾಜ್ಯದ ಪಶ್ಚಿಮದ ಅರ್ಧಭಾಗವನ್ನು ಸಂಧಿಸುತ್ತಿದ್ದರು. ಆತನು ರೋಮಾಪುರದ ಕ್ರೈಸ್ತರಿಗೆ ಬರೆದ ಈ ಪತ್ರಿಕೆಯು ಈ ಉದ್ದೇಶಕ್ಕೆ ದಾರಿಯನ್ನು ಸಿದ್ಧಗೊಳಿಸುವದಾಗಿತ್ತು. ಮತ್ತೊಂದೆಡೆ, ಪೌಲನು ರೋಮಾಪುರವನ್ನು ತಲುಪದಿದ್ದಲ್ಲಿ, ತನಗಿದ್ದ ಕ್ರೈಸ್ತತ್ವ ಸ್ವಭಾವದ ಕುರಿತ (ದೈವಪ್ರೇರೇಪಿತ( ಜ್ಞಾನವನ್ನು ಅನ್ಯಜನರ ಜಗತ್ತಿಗೆ ವಿವರಿಸುವ ಅಮೂಲ್ಯವಾದ ಸಂಗ್ರಹಣೆ ಇದಾಗುತ್ತಿತ್ತು.

ಪೌಲನು ಎಲ್ಲಾ ಕಾಲಗಳಿಗೆ ಕ್ರೈಸ್ತತ್ವದ ರೂಪರೇಖೆಯನ್ನು ನೀಡುತ್ತಿದ್ದಾನೆಂಬದು ಆತನಿಗೆ ಗ್ರಹಿಕೆಯಾಗಿತ್ತೋ? ಬಹುಶಃ ಇಲ್ಲ, ಆದರೆ ಅದು ಆತ್ಮನ ಉದ್ದೇಶವಾಗಿತ್ತೆಂದು ತೋರುತ್ತದೆ-ಯಾಕೆಂದರೆ ರೋಮಾಪುರದವರಿಗೆ ಬರೆದ ಪತ್ರಿಕೆಯು ಅದನ್ನೇ ನೇರವೇರಿಸುತ್ತದೆ. R. C. Bell ಅದನ್ನು ಹೀಗೆ ಕರೆದನು, "ಬೇರಿನಿಂದ ಫಲದ ವರೆಗಿನ ಕ್ರೈಸ್ತತ್ವದ ಒಂದು ಸಂಕ್ಷೇಪ್ತ ಹೇಳಿಕೆ."[14]

## ಹಿನ್ನಲೆ

ಈ ಪುಸ್ತಕವನ್ನು ಅರ್ಥಮಾಡಿಕೊಳ್ಳಲು ಅಗತ್ಯವಾದ ಸಿದ್ಧತೆಯ ಭಾಗವಾಗಿ, ಪೌಲನು ಸಂಬೋಧಿಸಿದ ಸಮಸ್ಯೆಯನ್ನು ನಿರೀಕ್ಷಿಸತಕ್ಕದ್ದು. ವಿವಿಧ ಸಮಸ್ಯೆಗಳ ಪಟ್ಟಿಯನ್ನು ಮಾಡಬಹುದು-ಕೆಲವು ಲೇಖಕನ ಕೋನದಿಂದ, ಇನ್ನು ಕೆಲವು ಸ್ವೀಕೃತರ ಕೋನದಿಂದಾಗಿವೆ-ಆದರೆ ನಮ್ಮ ತಕ್ಷಣದ ಆಸಕ್ತಿಯು ಪೌಲನಿಗೆ ಚಿಂತೆಯಾಗಿದ್ದ ಹಿನ್ನೆಲೆಯ ಸಮಸ್ಯೆ. ಅಲ್ಲಿ ಸಮಸ್ಯೆಯು *ಮೋಶೆಯ ಧರ್ಮಶಾಸ್ತ್ರಕ್ಕೆ ಕ್ರೈಸ್ತನೊಬ್ಬನ ಸಂಬಂಧ* ಎಂದು ಹೇಳುವದು ಅತ್ಯಂಥ ಸರಳವಲ್ಲ. ಕೆಲವು ಕ್ರೈಸ್ತ ಯೆಹೂದಿಗಳು (ಇಂದು ಅನೇಕ ವೇಳೆ ಅವರನ್ನು "ಯೆಹೂದಿಕರಣಗೊಳಿಸುವ ಉಪದೇಶಕರು" ಎನ್ನುತ್ತಾರೆ) ಬೋಧಿಸುತ್ತಿದ್ದದ್ದೇನೆಂದರೆ, ಯೇಸುವಿನ ಮತ್ತು ಅಪೊಸ್ತಲರ ಉಪದೇಶಗಳ ಜೊತೆಗೆ, ಅನ್ಯಜನರು ಮೋಶೆಯ ಧರ್ಮಶಾಸ್ತ್ರ ಅನುಸರಿಸಬೇಕು ಎಂಬುದು. ಇದೊಂದು ಹೊಸ ಸಮಸ್ಯೆಯಾಗಿರಲಿಲ್ಲ; ಪೌಲನು ಈ ಸಮಸ್ಯೆಯ ಕುರಿತು ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ ಬಗೆಹರಿಸಿದ್ದನು.

ಪೌಲನು ರೋಮಾಪುರದವರಿಗೆ ಬರೆದ ಪತ್ರಿಕೆಯಲ್ಲಿ ನೀಡಿದ ಪ್ರಾಥಮಿಕ ಉತ್ತರವು

ಗಲಾತ್ಯದಲ್ಲಿರುವಂತೆಯೇ ಇತ್ತು: ಮನುಷ್ಯನು ಧರ್ಮಶಾಸ್ತ್ರದಿಂದ ನೀತಿವಂತನೆಂದು ಎಣಿಸಲ್ಪಡುವದಿಲ್ಲ (3:20). ಹೇಗೂ, ಪೌಲನು ರೋಮಾಪುರದವರಿಗೆ ಬರೆದ ಪತ್ರಿಕೆ ಯಲ್ಲಿ ತನ್ನ ಉತ್ತರವನ್ನು ವಿಸ್ತರಿಸುತ್ತಾನೆ. ಗಲಾತ್ಯದಲ್ಲಿ ಆತನು, ಧರ್ಮಶಾಸ್ತ್ರವು ತಾತ್ಕಾಲಿಕವಾಗಿತ್ತೇ ಹೊರತು ಶಾಶ್ವತವಲ್ಲ ಎಂದು ವಾದಿಸಿದನು. ರೋಮಾಪುರದವರಿಗೆ ಬರೆದ ಪತ್ರಿಕೆಯಲ್ಲಿ, ಅದೇ ಸತ್ಯವನ್ನು ಆತನು ಕಲಿಸಿದನು (7:1-4) ಆದರೆ ವಿಷಯವನ್ನು ಮತ್ತಷ್ಟು ವಿವರಿಸಿದನು: ಒಬ್ಬನು ಮೋಶೇಯ ಧರ್ಮಶಾಸ್ತ್ರದಿಂದ ನೀತಿವಂತನೆಂದು ಎಣಿಸಲ್ಪಡುವದಿಲ್ಲ ಯಾಕೆಂದರೆ ಯಾವ ಧರ್ಮಶಾಸ್ತ್ರವೂ ಆತನನ್ನು ರಕ್ಷಿಸಲು ಸಮರ್ಥವಲ್ಲ. ಆತನಿಗೆ ಕರುಣೆ ಮತ್ತು ಕೃಪೆಯ ಅಗತ್ಯವಿರುತ್ತದೆ, ಇಲ್ಲವಾದರೆ ಆತನಿಗೆ ನಿರೀಕ್ಷೆಯೇ ಇಲ್ಲ! ನಮ್ಮ ರಕ್ಷಣೆಗೆ ಆಧಾರವಾಗಿ ನಂಬಿಕೆಯನ್ನು ಮಾತ್ರವೇ ಒಪ್ಪಿಕೊಳ್ಳಬಹುದಾಗಿದೆ-ಯಾಕೆಂದರೆ ಮನುಷ್ಯನು ತನ್ನ ಕ್ರಿಯೆಗಳಿಂದ ರಕ್ಷಿಸಲ್ಪಟ್ಟರೆ, ಆತನ ರಕ್ಷಣೆ ಕೃಪೆಯಿಂದ ಆಗಿರಲಾರದು (11:6).

ಪೌಲನ ವಿಚಾರಧಾರೆ ಇಡೀ ಪುಸ್ತಕವನ್ನು ಮುಗಿಸುವಾಗ ಹೆಚ್ಚು ಹೆಚ್ಚು ಸ್ಪಷ್ಟಗೊಳ್ಳುವದು. ಹೇಗೂ, ಅಧ್ಯಯನದ ಪ್ರಾರಂಭದಲ್ಲಿ ಅದರ ರೂಪರೇಖೆಯನ್ನು ನೋಡುವದರಿಂದ ಅದನ್ನು ತಕ್ಷಣವೇ ಗುರುತಿಸುವದಕ್ಕೆ ವೇದಿಕೆಯನ್ನು ಹಾಕುತ್ತದೆ. ವಿದ್ಯಾರ್ಥಿಯು ಇದನ್ನು ಮನಸ್ಸಿನಲ್ಲಿಡುವಾಗ, ಸತ್ಯವು ಹೆಚ್ಚು ಹೆಚ್ಚು ದೊಡ್ಡದಾಗುವದನ್ನು ಕಾಣುವನು.

## ಮಹತ್ವ

ರೋಮಾಪುರದವರಿಗೆ ಬರೆದ ಪತ್ರಿಕೆಯು "ಕ್ರೈಸ್ತತ್ವದ ಹೃದಯಬಡಿತ" ವನ್ನೊಳಗೊಂಡಿದೆ ಎಂದು ಹೇಳಲಾಗಿದೆ. ಇದರ ಮೌಲ್ಯದ ಬಗ್ಗೆ ಸಾಕಷ್ಟು ಸಾಕ್ಷಿಗಳನ್ನು ಕೊಡಬಹುದು. Samuel Taylor Coleridge ಈ ಪುಸ್ತಕವನ್ನು ಹೀಗೆ ಕರೆದರು "ಅಸ್ತಿತ್ವದಲ್ಲಿರುವ ಅತ್ಯಂಥ ಸವಿಸ್ತಾರವಾದ ಕೃತಿ."[15] Alexander Campbell ಹೀಗೆ ಹೇಳುತ್ತಾರೆ, ರೋಮಾಪುರದವರಿಗೆ ಬರೆದ ಪತ್ರಿಕೆಯ ಸಂದೇಶವು ಪೌಲನ ಎಲ್ಲಾ ಪತ್ರಿಕೆಗಳಿಗೆ ಪ್ರಮುಖವಾಗಿರುತ್ತದೆ.[16] Tenney ಇದನ್ನು "ಕ್ರೈಸ್ತ ವೇಧಾಂತದ ಮೂಲಾಧಾರ" ಎಂದು ಕರೆದರು.[17] Augustine, Luther, ಮತ್ತು Moody ಯಂತಹ ಧಾರ್ಮಿಕ ನಾಯಕರು ರೋಮಾಪುರದವರಿಗೆ ಬರೆದ ಪತ್ರಿಕೆಯು ತಮ್ಮ ಜೀವಿತಗಳಿಗೆ ಸ್ಫೂರ್ತಿಯೆಂದು ಹೇಳಿಕೊಂಡರು. Edward Fudge ಈ ಪತ್ರಿಕೆಯನ್ನು "ಸಭಾ ಚರಿತ್ರೆಯ ರೂಪಕಾರಕ" ಎಂದು ಕರೆದರು.[18]

ಇದರಿಂದ ರೋಮಾಪುರದವರಿಗೆ ಬರೆದ ಪತ್ರಿಕೆಯು ಹೊಸ ಒಡಂಬಡಿಕೆಯ ಅತ್ಯಂಥ ಪ್ರಾಮುಖ್ಯ ಪುಸ್ತಕ ಅಥವಾ ಹೊಸ ಒಡಂಬಡಿಕೆಯ ಉಳಿದ ಪುಸ್ತಕಗಳನ್ನು ನಿರ್ಲಕ್ಷಿಸಿ ಇದರ ಮೇಲೆ ಗಮನ ಕೇಂದ್ರಿಕರಿಸಬೇಕೆಂದು ಹೇಳುತ್ತಿಲ್ಲ. James Burton Coffman ಹೇಳಿದ್ದು ಸರಿಯಾಗಿಯೇ ಇದೆ, "ಪವಿತ್ರ ಗ್ರಂಥದಲ್ಲಿನ ಒಂದು ಭಾಗವನ್ನು ಮತ್ತೊಂದಕ್ಕಿಂತಲೂ ಉನ್ನತ್ತಕ್ಕೇರಿಸುವದು ಅಪಾಯಕರ, ವಿಶೇಷವಾಗಿ, ಹಾಗೆ ಮಾಡುವದಾದರೆ ದೇವರ ಪ್ರಕಟಣೆಯ ಅತ್ಯವಶ್ಯಕವಾದ ಐಕ್ಯತೆಯನ್ನು ಕೇಡಿಸಿದಂತಾ ಗುವದು."[19] Douglas J. Moo ತೋರಿಸುವದೇನೆಂದರೆ ರೋಮಾಪುರದವರಿಗೆ ಬರೆದ

ಪತ್ರಿಕೆಯಲ್ಲಿ ಕಾಣದಿರುವ ಸಂಗತಿಯೆಂದರೆ "ಕ್ರಿಸ್ತತ್ವದ [ಕ್ರಿಸ್ತನ ಜೀವನ, ಗುಣನಡತೆ, ಮತ್ತು ಸ್ವಭಾವದ ಕುರಿತ ಅಧ್ಯಯನ], ಅಥವಾ ಅಂತ್ಯಕಾಲ ಶಾಸ್ತ್ರ ['ಕಡೇ ಸಂಗತಿಗಳ,' ಎರಡನೆ ಬರೋಣವು ಸೇರಿದ ಅಧ್ಯಯನ], ಅಥವಾ ಸಭಾಶಾಸ್ತ್ರ [ಸಭೆ ಮತ್ತು ದೇವರ ಸಂಕಲ್ಪದಲ್ಲಿ ಅದರ ಸ್ಥಾನದ ಬಗ್ಗೆ ಅಧ್ಯಯನ ಕುರಿತ ಮಹತ್ತರ ಚರ್ಚೆ (ನೋಡಿರಿ ಎಫೆಸ 3:10, 11)]."[20]

ರೋಮಾಪುರದವರಿಗೆ ಬರೆದ ಪತ್ರಿಕೆಯೇ ಎಲ್ಲಾ ಪ್ರಾಮುಖ್ಯವುಳ್ಳದ್ದಲ್ಲ ಆದರೆ ಅದು ಪ್ರಾಮುಖ್ಯವಾದದ್ದು ಅತಿ ಪ್ರಾಮುಖ್ಯವಾದದ್ದು. Anders Nygren ಅದನ್ನು "ಪೌಲನ ಸುವಾರ್ತೆ" ಎಂದು ಪರಿಗಣಿಸಿದನು.[21] John R. W. Stott ಈ ಬಣ್ಣನೆಯನ್ನು ನೀಡಿದರು:

> ರೋಮಾಪುರದವರಿಗೆ ಬರೆದ ಪತ್ರಿಕೆಯು ಹೊಸ ಒಡಂಬಡಿಕೆಯಲ್ಲಿ ಅತ್ಯಂಥ ಪೂರ್ಣವಾದ ಮತ್ತು ಅತಿ ಸುಸಂಬದ್ಧವಾದ ಕ್ರೈಸ್ತ ಸುವಾರ್ತೆಯ ಪ್ರಣಾಳಿಕೆಯಾಗಿರುತ್ತದೆ. ಇದರಲ್ಲಿ ಅಪೊಸ್ತಲನಾದ ಪೌಲನು "ದೇವರ ಸಂಕಲ್ಪವನ್ನೆಲ್ಲಾ ನಿಮಗೆ ತಿಳಿಸಿದೆನು." . . . ಆತನ ವ್ಯಾಖ್ಯಾನದಲ್ಲಿ ಒಂದು ವೈಭವ, ಸವಿಸ್ತಾರತೆ, ಒಂದು ತಾರ್ಕಿಕತೆ ಇದ್ದು ಅದು ಎಲ್ಲಾ ಪೀಳಿಗೆಗಳಲ್ಲಿ ಅದನ್ನು ಅಭ್ಯಾಸಿಸಬೇಕು ಎಂಬ ಬಯಕೆ ಮತ್ತು ಪ್ರಶಂಸೆಯನ್ನು ಉಂಟುಮಾಡಿರುತ್ತದೆ.[22]

Chrysostom ಈ ಪತ್ರಿಕೆಯನ್ನು "ಆತ್ಮೀಕ ತುತ್ತೂರಿ" ಎಂದು ಕರೆದನು.[23] ತುತ್ತೂರಿಗಳು ನಮ್ಮ ಗಮನವನ್ನು ಸೆಳೆಯುವದಕ್ಕಾಗಿವೆ, ನಮ್ಮನ್ನು ಎಬ್ಬಿಸುವದಕ್ಕೆ ಇರುತ್ತವೆ, ಮತ್ತು ಅದನ್ನೇ ಪೌಲನ ಪತ್ರಿಕೆ ಮಾಡುತ್ತದೆ!

ರೋಮಾಪುರದವರಿಗೆ ಬರೆದ ಪತ್ರಿಕೆಯ ಮಹತ್ವವು ತೋರಿಸುವದೇನೆಂದರೆ ಅದು ಅರ್ಥಮಾಡಿಕೊಳ್ಳಲ್ಪಡ ಬೇಕೆಂಬುದು ಪೌಲನ (ಮತ್ತು ದೇವರ) ಇಚ್ಛೆಯಾಗಿತ್ತು. ಈ ಪತ್ರಿಕೆ ಭಯಹುಟ್ಟಿಸುವಂತದ್ದು. ಇದು ಪೌಲನೇನೋ ಯೋಚನೆಮಾಡದೆ ಗೀಚಿರುವಂತ ಒಂದು ಧಾರ್ಮಿಕ ಪ್ರಬಂಧ ಅಥವಾ ಸಾಮಾನ್ಯ ಪತ್ರವ್ಯವಹಾರ ಆಗಿರುವದಿಲ್ಲ. ರೋಮಾಪುರದವರಿಗೆ ಬರೆದ ಪತ್ರಿಕೆಯಲ್ಲಿ ಹೆಚ್ಚು ಕಠಿಣವಾದ ಭಾಗಗಳನ್ನು ಮನಸ್ಸಿನಲ್ಲಿಟ್ಟುಕೊಂಡೇ ಪೇತ್ರನು ಪೌಲನ ಪತ್ರಿಕೆಗಳಲ್ಲಿನ ಸಂಗತಿಗಳು "ಅರ್ಥಮಾಡಿಕೊಳ್ಳಲು ಕಠಿಣ" ಎಂದು ಹೇಳಿರಬೇಕು ಎಂಬದಾಗಿ ಒಬ್ಬನು ಭಾವಿಸಬಹುದು (2 ಪೇತ್ರ 3:16). ರೋಮಾಪುರದವರಿಗೆ ಬರೆದ ಪತ್ರಿಕೆಯನ್ನು ಅರ್ಥಮಾಡಿಕೊಳ್ಳಲು ಏಕೆ ಕಠಿಣ ಎಂಬದಕ್ಕೆ Henry H. Halley ಎರಡು ಕಾರಣಗಳನ್ನು ಕೊಡುತ್ತಾರೆ:

> ಒಂದು ಕಾರಣವೇನಂದರೆ ಪೌಲನ ಬರಹದ ಶೈಲಿ. ಆತನಿಗೆ ಒಂದು ವಿಷಯವನ್ನು ಪ್ರಾರಂಭಿಸಿ ನಂತರ ವಿಷಯಾಂತರ ಮಾಡುತ್ತಲೇ ಹೋಗುವಂಥ ಹವ್ಯಾಸವಿತ್ತು, ಹೀಗೆ ಕೆಲವು ಸಾರಿ ಆದಾದ ತಕ್ಷಣ ಬರುವ ವಿಷಯಕ್ಕೆ ಹೋಗುವ ಬದಲಾಗಿ ಮತ್ತೇ ಹಿಂದಕ್ಕೆ ಹೋಗುವದರಿಂದ ಅವುಗಳ ನಡುವಿನ ಸಂಬಂಧವನ್ನು ಕಾಣುವದಕ್ಕೆ ಕಷ್ಟಕರವಾಗುತ್ತದೆ. ಇನ್ನೊಂದು ಕಾರಣವೆಂದರೆ ಪತ್ರಿಕೆಯು ಒಂದು ಸಮಸ್ಯೆಯ ಬಗ್ಗೆ ಮಾತಾಡುತ್ತದೆ, ಆ ಸಮಸ್ಯೆಯು ನಮಗೊಂದು ಸಮಸ್ಯೆಯೇ ಆಗಿರುವದಿಲ್ಲ, ಆದರೆ ಆ ಕಾಲದಲ್ಲಿ ಅದು ಸುದ್ಧಿಯಲ್ಲಿರುತ್ತಿದ್ದ ಉರಿಯುವ ಸಮಸ್ಯೆಯಾಗಿರುತ್ತಿತ್ತು: ಒಬ್ಬ ಅನ್ಯಜನಾಂಗದವನು ಯೆಹೂದ್ಯನಾಗಿ ಮತಾಂತರ ಹೊಂದದೆಯೇ ಒಬ್ಬ

ಕ್ರೈಸ್ತನಾಗಿರುವದಕ್ಕೆ ಸಾಧ್ಯವೋ.[24]

ಮೂರನೆಯ ಕಾರಣವನ್ನು ಸೇರಿಸಬಹುದು: ನಮ್ಮಲ್ಲಿ ಅನೇಕರಿಗೆ ಹೆಚ್ಚಾಗಿ ಆಲೋಚನೆ ಮಾಡುವ ಕುರಿತು ಹೆಚ್ಚು ಇಷ್ಟವಿರುವದಿಲ್ಲ. ರೋಮಾಪುರದವರಿಗೆ ಬರೆದ ಪತ್ರಿಕೆಯು ಒಗಟಾಗಿರಬಲ್ಲದು. ಜನರು ರಕ್ಷಣೆ ಹೊಂದುವದಕ್ಕೆ ಏನಾದರೂ ಮಾಡಬೇಕೆಂದು ನಮ್ಮಲ್ಲಿ ನಂಬುವವರು (ಅಪೊಸ್ತಲರ ಕೃತ್ಯಗಳು 2:37, 38) "ರಕ್ಷಣೆಯು ಕ್ರಿಯೆ ಮಾಡದ ಆದರೆ ನಂಬಿಕೆಯಿಡುವವನಿಗೆ ಸಿಕ್ಕುವ ವರ" ಎಂಬ ವಾಕ್ಯ ಭಾಗವನ್ನು ನೋಡಿದಾಗ ಗೊಂದಲಕ್ಕಿಡಾಗಬಹುದು (ರೋಮಾಪುರ 4:5). ರೋಮಾಪುರದವರಿಗೆ ಬರೆದ ಪತ್ರಿಕೆಯು "ನಂಬಿಕೆಯಿಂದಲೇ ರಕ್ಷಣೆ" ಎಂದು ಕಲಿಸುತ್ತದೆಂದು ಮನವರಿಕೆಯಾದವರು "ದೇವರು ಪ್ರತಿಯೊಬ್ಬನಿಗೂ ಅವನವನ ಕೃತ್ಯಗಳಿಗೆ ತಕ್ಕ ಪ್ರತಿಫಲವನ್ನು ಕೊಡುವನು" ಎಂಬದನ್ನು ನೋಡುವಾಗ ಅಸ್ತವ್ಯಸ್ತಗೊಳ್ಳುವರು (2:6). ರೋಮಾಪುರದವರಿಗೆ ಬರೆದ ಪತ್ರಿಕೆಗೆ ಚಿಂತನೆ-ಹೆಚ್ಚು ಚಿಂತನೆ, ಗಂಭೀರ ಚಿಂತನೆಯ-ಅಗತ್ಯವಿರುತ್ತದೆ. ಈ ಕಾರಣದಿಂದ Eugene Peterson ಈ ಪತ್ರಿಕೆಯನ್ನು "ಚಿಂತನೆಯಲ್ಲಿ ಒಂದು ಸಾಹಸ."[25] ಎಂದು ಕರೆದರು.

Bell ರವರು ಈ ಗುಣಲಕ್ಷಣಗಳನ್ನು ಉಪಯೋಗಿಸಿದ್ದಾರೆ: "ಇದು ಕೇವಲ ರುಚಿ ನೋಡತಕ್ಕ, ಅಥವಾ ಅವಸರವಾಗಿ ನುಂಗಿಬಿಡುವ ಪುಸ್ತಕವಲ್ಲ: 'ಮೆಲಕು ಹಾಕಿ ಜೀರ್ಣಿಸಿಕೊಳ್ಳಬೇಕಾದ ಪುಸ್ತಕ' . . . ರೋಮಾಪುರದರಿಗೆ ಬರೆದ ಪತ್ರಿಕೆಯು ಗಂಭೀರವಾದ, ಹಂಬಲ, ಆಸಕ್ತಿಯಿರುವ ವಿದ್ಯಾರ್ಥಿಗಳಿಗಾಗಿಯೇ ಇರುತ್ತದೆ, ಜೀವಿತದಲ್ಲಿ ಆಳವಾದ, ಉನ್ನತವಾದ ಬಯಕೆಯಿರುವವರಿಗೆ ಇರುತ್ತದೆ."[26] Prentice Meador ರವರು ರೋಮಾಪುರದವರಿಗೆ ಬರೆದ ಪತ್ರಿಕೆಯ ಮೇಲೆ ಸಂದೇಶದ ಸರಣಿಯನ್ನು ಪ್ರಾರಂಭಿಸುತ್ತಾ ನೀಡಿದ ದೃಷ್ಟಾಂತ ಹೀಗಿತ್ತು: "ನಾವು ಆಳವಿಲ್ಲದ ಕಡೆಯಲ್ಲಿ ಅಲ್ಲ; ನಮ್ಮ ತಲೆಯವರೆಗೂ ನೀರು ಬರುವಷ್ಟು ಹದಿನಾರು ಅಡಿಗಳಷ್ಟು ಆಳವಾದ ನೀರಿನಲ್ಲಿದ್ದೇವೆ!"[27]

ಹೇಗೂ, ಒತ್ತಿ ಹೇಳಬೇಕಾದದ್ದೇನೆಂದರೆ, ರೋಮಾಪುರದವರಿಗೆ ಬರೆದ ಪತ್ರಿಕೆಯನ್ನು ಅರ್ಥಮಾಡಿಕೊಳ್ಳುವದು *ಅಸಾಧ್ಯವೇನಲ್ಲ.* ಜೀವಿತಕಾಲವೆಲ್ಲಾ ಅಧ್ಯಯನ ಮಾಡಿದರೂ ಈ ಪತ್ರಿಕೆಯ ಕೆಲವು ಭಾಗಗಳು ಗೊಂದಲದಿಂದ ಉಳಿಯುತ್ತವೆ; ಆದರೆ ಇದರ ಪ್ರಧಾನ ಸಂದೇಶವನ್ನು ಯಾರೂ ಗ್ರಹಿಸಲಾಗದಿದ್ದಲ್ಲಿ, ನಮಗಾಗಿ ಇದನ್ನು ಸಂರಕ್ಷಿಸುತ್ತಿರಲಿಲ್ಲ.

ದೇವರನ್ನು ಆಕಾಂಕ್ಷಿಸುವವರಿಗೆ ಅದರ ಉಪದೇಶಗಳನ್ನು ತಮ್ಮದಾಗಿಸಿಕೊಳ್ಳಲು ಅಗತ್ಯವಾದ ಶ್ರಮಗಳನ್ನು ವಹಿಸುವದಕ್ಕೆ ಅನೇಕ ಕಾರಣಗಳನ್ನು ಕೊಡಬಹುದು. ಪೌಲನ ಕೆಲವು ಬರಹಗಳು ಅರ್ಥಮಾಡಿಕೊಳ್ಳಲು ಕಷ್ಟಕರವೆಂದು ಮಾತ್ರ ಪೇತ್ರನು ಹೇಳಲಿಲ್ಲ, ಆದರೆ ಆತನು ಕೆಲವು "ವಿದ್ಯಾಹೀನರೂ ಚಪಲಚಿತ್ತರೂ" ಆ ಬರಹಗಳನ್ನು "ತಪ್ಪಾದ ಅರ್ಥ ಮಾಡಿಕೊಂಡು ತಮಗೆ ನಾಶವನ್ನುಂಟುಮಾಡಿ ಕೊಳ್ಳುತ್ತಾರೆ" ಎಂದು ಸಹ ಹೇಳಿದನು (2 ಪೇತ್ರ 3:16). "ರಕ್ಷಣೆಯು ನಂಬಿಕೆಯಿಂದ ಮಾತ್ರವೇ" ಎಂದು ಕಲಿಸಲು ರೋಮಾಪುರ 1-4ನ್ನು ಉಪಯೋಗಿಸುವವರಿಗೆ, ತಮಗೆ ರೋಮಾಪುರ 5 ರಲ್ಲಿ "ಮೂಲ ಪಾಪ" ಸಿಕ್ಕಿತು ಎಂದು ಯೋಚಿಸುವವರಿಗೆ, ಮತ್ತು ತಮ್ಮ ಯುಗ ಸಿದ್ಧಾಂತವನ್ನು ರೋಮಾಪುರದವರಿಗೆ

9-11ರ ಮೇಲೆ ಆಧಾರಮಾಡಿಕೊಳ್ಳುವವರಿಗೆ ಒಬ್ಬನು ಉತ್ತರಿಸಲು ಶಕ್ತನಾಗಿರಬೇಕು. ಹೆಚ್ಚು ಪ್ರಾಮುಖ್ಯವಾಗಿ, ರೋಮಾಪುರದವರಿಗೆ ಬರೆದ ಪತ್ರಿಕೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾದದ್ದನ್ನೆಲ್ಲಾ ಮಾಡಬೇಕಾದ ಅಗತ್ಯವಿರುತ್ತದೆ ಯಾಕೆಂದರೆ ಅದರಿಂದ ಅವನಿಗೆ ಬಹಳ ಪ್ರಯೋಜನವಿರುತ್ತದೆ. ಒಬ್ಬನು ಪೌಲನ ಪ್ರಮುಖ ವಿಚಾರಧಾರೆಯನ್ನು ಅರ್ಥಮಾಡಿಕೊಂಡಾಗ, ಸಹಜವಾಗಿ ಅದು ಅವನ ಜೀವನದ ದಿಕ್ಕನ್ನೇ ಬದಲಾಯಿಸುವದು. Bell ಎಂಬವರ ಒಂದು ನೆಚ್ಚಿನ ಹೇಳಿಕೆಯೆಂದರೆ, "ನಿನಗೆ ರೋಮಾಪುರದವರಿಗೆ ಬರೆದ ಪತ್ರಿಕೆ ಸಿಕ್ಕರೆ, ದೇವರಿಗೆ ನೀನು ಸಿಗುವಿ!"[28]

## ಚರ್ಚಿಸುವ ಅಂಶಗಳು (ವಿಷಯ)

### ಚರ್ಚೆಯಾಂಶದ ಹೇಳಿಕೆ (ಗಳು)

ಈ ಪತ್ರಿಕೆಯಲ್ಲಿ ಸಂಭೋದಿಸಲಾದ ಹಿನ್ನೆಲೆ ಸಮಸ್ಯೆಯ ಸ್ವರೂಪದ ಕಾರಣದಿಂದ, ರೋಮಾಪುರ 3:28 ಪತ್ರಿಕೆಯ ಮುಖ್ಯ ಚರ್ಚೆಯಾಂಶವನ್ನು ತಿಳಿಸುವದಾಗಿದೆ ಎಂದು ಕೆಲವರು ಹೇಳಬಹುದು: "ಧರ್ಮ ಪ್ರಮಾಣ ಸಂಬಂಧವಾದ ಕರ್ಮಗಳಿಲ್ಲದೆ ನಂಬಿಕೆಯಿಂದಲೇ ಮನುಷ್ಯರು ನೀತಿವಂತರೆಂದು ನಿರ್ಣಯಿಸಲ್ಪಡುವರೆಂಬದಾಗಿ ನಿಶ್ಚಯ ಮಾಡಿಕೊಂಡಿದ್ದೇವಲ್ಲಾ." ಇತರ ವಾಕ್ಯಭಾಗಗಳನ್ನು ಸಲಹೆಮಾಡಲಾಗಿದೆ, ಅದರಲ್ಲಿ 5:1 ಸೇರಿಸಲಾಗಿದೆ ಆದರೆ ಬಹಳ ಜನ 1:16, 1:17, ಅಥವಾ ಇವೆರಡರ ಸಮ್ಮಿಲನವು ಪತ್ರಿಕೆಯ ಚರ್ಚೆಯಾಂಶವನ್ನು ತಿಳಿಸುತ್ತದೆ:

> ಸುವಾರ್ತೆಯ ವಿಷಯದಲ್ಲಿ ನಾನು ನಾಚಿಕೊಳ್ಳುವನಲ್ಲ. ಆ ಸುವಾರ್ತೆಯು ದೇವರ ಬಲಸ್ವರೂಪವಾಗಿದ್ದು ಮೊದಲು ಯೆಹೂದ್ಯರಿಗೆ ಆ ಮೇಲೆ ಗ್ರೀಕರಿಗೆ ಅಂತೂ ನಂಬುವವರೆಲ್ಲರಿಗೂ ರಕ್ಷಣೆ ಉಂಟು ಮಾಡುವಂಥದಾಗಿದೆ. ಹೇಗೆಂದರೆ ದೇವರಿಂದ ದೊರಕುವ ನೀತಿಯು ಅದರಲ್ಲಿ ತೋರಿಬರುತ್ತದೆ [ಹಬಕ್ಕೂಕನು 2:4 ರಲ್ಲಿ], "ನೀತಿವಂತನು ನಂಬಿಕೆಯಿಂದಲೇ ಬದುಕುವನೆಂಬ" ಶಾಸ್ತ್ರೋಕ್ತಿಯ ಪ್ರಕಾರ ಆ ನೀತಿಯು ನಂಬಿಕೆಯ ಫಲವಾಗಿದ್ದು ನಂಬಿಕೆಯನ್ನು ಪ್ರಕಟಿಸುವಂಥದಾಗಿದೆ (1:16, 17).

ಹೇಗೂ, ಲೇಖಕರು ಈ ವಚನಗಳಲ್ಲಿನ ಮುಖ್ಯ ಪದಗಳ ಬಗ್ಗೆ ಸಮ್ಮತ ತೋರುವದಿಲ್ಲ. ಕೆಲವರು "ಸುವಾರ್ತೆ" ಯನ್ನು, ಇನ್ನು ಕೆಲವರು "ನಂಬಿಕೆ" ಮತ್ತು ಇತರರು "ನೀತಿವಂತಿಕೆ" ಮತ್ತು "ನೀತಿವಂತ" ಎಂಬದನ್ನು ಒತ್ತಿ ಹೇಳುತ್ತಾರೆ. ಈ ಎಲ್ಲಾ ಪದಗಳೂ ಪ್ರಾಮುಖ್ಯ; ಅವುಗಳಲ್ಲಿ ಒಂದನ್ನೂ ಹಗುರವಾಗಿ ಎಣಿಸಬಾರದು.

### ಮುಖ್ಯ ಭಾವಗಳು

ಹೊಸ ಒಡಂಬಡಿಕೆಯ ಲೇಖಕನು ಅನುಸರಿಸುವ ದಾರಿಯನ್ನು ಎದುರುನೋಡುವ ಒಂದು ರೀತಿಯೆಂದರೆ ಆತನ ಪತ್ರಿಕೆಯ ಆರಂಭವನ್ನು ಆತನ ಮುಕ್ತಾಯದೊಂದಿಗೆ ಹೋಲಿಸಿ ನೋಡುವದು. ಹಾಗಾದರೆ ಎರಡು ಪ್ರಾಮುಖ್ಯವಾದ ವಾಕ್ಯಭಾಗಗಳೆಂದರೆ 1:1-6 ಮತ್ತು 16:20-27. ಇವೆರಡರಲ್ಲಿ ಯಾವ ಪದಗಳು, ಮತ್ತು ಆಲೋಚನೆಗಳು

ಸಾಧಾರಣವಾಗಿವೆ?

"ದೇವರು" ಪ್ರಸ್ತಾಪಿಸಲ್ಪಟ್ಟಂತೆ (1:1, 4; 16:20, 26, 27) "ಕ್ರಿಸ್ತನು" ಎಂಬುದು ಪ್ರತಿ ಭಾಗದಲ್ಲಿ ಹಲವಾರು ಸಾರಿ ಉಲ್ಲೇಖಿಸಲ್ಪಟ್ಟಿದೆ (1:1, 4, 6; 16:25, 27). ಇವೆರಡೂ ಪೌಲನ ಸಂದೇಶಕ್ಕೆ ಪ್ರಮುಖವಾಗಿರುತ್ತವೆ. "ಸುವಾರ್ತೆ" ಎಂಬ ಪದ ಎರಡೂ ವಾಕ್ಯಭಾಗಗಳಲ್ಲಿ ಕಾಣಿಸುತ್ತದೆ (1:1; 16:25), ಮತ್ತು "ಕೃಪೆ" ಎಂಬುದು ಸಹ (1:5; 16:24). ಇವುಗಳು ಮುಖ್ಯ ಪದಗಳಾಗಿರುವವು. ದೇವರು "ಮುಂಚಿತವಾಗಿ ಪವಿತ್ರಶಾಸ್ತ್ರಗಳಲ್ಲಿ ತನ್ನ ಪ್ರವಾದಿಗಳ ಮೂಲಕ ಮಾತುಕೊಟ್ಟನು" ಎಂದು ರೋಮಾಪುರ 1:2 ಹೇಳುತ್ತದೆ. ಅದೇ ವೇಳೇ 16:26 "ಪ್ರವಾದಿಗಳ ಗ್ರಂಥಗಳಿಂದ" ತೋರ್ಪಡಿಸಲ್ಪಟ್ಟದ್ದರ ಕುರಿತಾಗಿ ಮಾತಾಡುತ್ತದೆ. ಒಬ್ಬನು ರೋಮಾಪುರದವರಿಗೆ ಬರೆದ ಪತ್ರಿಕೆಯನ್ನು ಓದುವಾಗ, ಪೌಲನು ತನ್ನ ವಾದವನ್ನು ಬಲಪಡಿಸಲು ಹಳೆಒಡಂಬಡಿಕೆಯ ಮೇಲೆ ಹೇಗೆ ನಿರಂತರವಾಗಿ ಅವಲಂಭಿತನಾದನೆಂಬದನ್ನು ಗಮನಿಸಬಹುದು.

ಅತ್ಯಂತ ಗಮನಾರ್ಹ ಹೋಲಿಕೆಗಳಲ್ಲೊಂದು 1:5 ಮತ್ತು 16:26 ರಲ್ಲಿ ಸಿಕ್ಕುತ್ತದೆ. 1:5 ರಲ್ಲಿ, ಪೌಲನು ತಾನು ಅಪೊಸ್ತಲತ್ವವನ್ನು ಪಡೆದನೆಂದು ಬರೆದನು. "ಆತನ ಹೆಸರಿನ ಪ್ರಸಿದ್ಧಿಗಾಗಿ ಎಲ್ಲಾ ಅನ್ಯ ಜನಗಳಲ್ಲಿ ನಂಬಿಕೆಯೆಂಬ ವಿಧೇಯತ್ವ ಉಂಟಾಗುವದಕ್ಕೋಸ್ಕರ ನಾವು ಆತನ ಮೂಲಕವಾಗಿ ಕೃಪೆಯನ್ನೂ ಅಪೊಸ್ತಲತನವನ್ನೂ ಹೊಂದಿದೆವು." 16:26 ರಲ್ಲಿ, ಆತನು ಹೇಳಿದ್ದೇನೆಂದರೆ, ಆತನ ಬೋಧನೆಯ ಮುಖಾಂತರ, ಸುವಾರ್ತೆಯು "ಎಲ್ಲಾ ದೇಶಗಳಿಗೆ, ಅನ್ಯಜನರೆಲ್ಲರಿಗೆ ನಂಬಿಕೆಯೆಂಬ ವಿಧೇಯತ್ವವನ್ನು ಉಂಟುಮಾಡುವದಕ್ಕೋಸ್ಕರ ತಿಳಿಸಲ್ಪಟ್ಟಿದೆ." ಇಲ್ಲಿ "ಅನ್ಯಜನ" (ಯೆಹೂದ್ಯೇತರರು) ಮತ್ತು "ದೇಶಗಳು" ಎರಡೂ ಗ್ರೀಕ್.ನ (ἔθνος, *ethnos*) ಒಂದೇ ಪದದಿಂದ ಅನುವಾದಿಸಲ್ಪಟ್ಟಿದೆ. ಮೂರು ಸಂದೇಶಗಳು ಪತ್ರಿಕೆಯುದ್ದಕ್ಕೂ ದಾರಗಳಂತೆ ಸಾಗುತ್ತವೆ:

> ದೈವಶಾಸ್ತ್ರದ ಸಂದೇಶ: ರಕ್ಷಣೆಯು *"ನಂಬಿಕೆ" ಯ ಆಧಾರದ ಮೇಲೆ ನಿಂತಿದೆ.*
> ಅಭ್ಯಾಸ ಸಾಧ್ಯವಾದ ಸಂದೇಶ: *ಈ ನಂಬಿಕೆಯು "ವಿಧೇಯತೆಯಲ್ಲಿ" ತೋರ್ಪಡುತ್ತದೆ.* ಹೊರಗಿನ ಅನ್ಯಪಾಪಿಗಳ ವಿಧೇಯತೆಯು ಪ್ರಸ್ತಾಪಿಸಲ್ಪಟ್ಟಿ ರುತ್ತದೆ (ನೋಡಿರಿ 6:16, 17),[29] ಆದರೆ ಕ್ರೈಸ್ತರಿಂದ ನಿರೀಕ್ಷಿಸಲಾದ ವಿಧೇಯತೆಯ ಕುರಿತು ಪತ್ರಿಕೆಯ ನಂತರದ ಭಾಗದಲ್ಲಿ ಒತ್ತಿ ಹೇಳಲಾಗಿದೆ (ಅಧ್ಯಾಯಗಳು 12-16).
> ಸಾರ್ವತ್ರಿಕ ಸಂದೇಶ: *ರಕ್ಷಣೆ "ಎಲ್ಲಾ ದೇಶಗಳವರಿಗೆ."* ಎಲ್ಲರೂ ಕಳೆದು ಹೋಗಿದ್ದಾರೆ ಮತ್ತು ರಕ್ಷಣೆಯ ಅಗತ್ಯದಲ್ಲಿದ್ದಾರೆ. ಎಲ್ಲರೂ ಒಂದೇ ವಿಧದಲ್ಲಿ ರಕ್ಷಿಸಲ್ಪಡುವರು-ನಂಬಿಕೆಯ ಮೂಲಕ ಕೃಪೆಯಿಂದ.

ಇದನ್ನು Dale Hartman ಹೀಗೆ ದೃಷ್ಟಾಂತಗೊಳಿಸಿದ್ದಾರೆ:[30] 1:1-6 ರಲ್ಲಿ, ಪೌಲನು ಒಂದು ಪಂಥವನ್ನು ನೆಡುತ್ತಾನೆ; 16:20-27 ರಲ್ಲಿ, ಆತನು ಇನ್ನೊಂದು ಪಂಥವನ್ನು ನೆಡುತ್ತಾನೆ. ಈ ಎರಡು ಪಂಥಗಳ ನಡುವೆ ಆತನು ಒಂದು ಗೆರೆಯನ್ನು ಎಳೆದು ಆ

ಗೆರೆಯ ಮೇಲೆ ತನ್ನ ವಾದಗಳನ್ನು ಮತ್ತು ತೀರ್ಮಾನಗಳನ್ನು ನೇತು ಹಾಕುತ್ತಾನೆ.

### ಪ್ರಮುಖ ಪದಗಳು

ರೋಮಾಪುರದವರಿಗೆ ಬರೆದ ಪತ್ರಿಕೆಯಲ್ಲಿ ಮಹತ್ವವಾದ ಪದಗಳು ಉದ್ಭವವಾಗುವದನ್ನು ಒಬ್ಬನು ಗಮನಿಸಬಹುದು. Larry Deason ರವರು ಇಂಥ ಅನೇಕ ಮುಖ್ಯ ಪದಗಳನ್ನು ಮತ್ತು ಅವುಗಳು ಎಷ್ಟು ಸಾರಿ ಕಾಣಿಸಿಕೊಂಡಿವೆ ಎಂಬುದರ ಬಗ್ಗೆ ಪಟ್ಟಿಯನ್ನು ಮಾಡಿದ್ದಾರೆ.[31] ಉಪಯೋಗಿಸಲ್ಪಡುವ ಭಾಷಾಂತರಗಳಿಗೆ ಅನುಗುಣವಾಗಿ ಪದಗಳ ಸಂಖ್ಯೆಯು ಹೆಚ್ಚುಕಡಿಮೆ ಆಗಬಹುದು, ಆದರೆ ಕೆಳಗೆ Deason ಪಟ್ಟಿಯಿಂದ ಉದಾಹರಣೆಗಳು:

"ನೀತಿವಂತಿಕೆ" (ಮತ್ತು ಸಂಬಂಧಿತ ಪದಗಳು)—66 ಸಾರಿ
"ಧರ್ಮಶಾಸ್ತ್ರ" —75 ಸಾರಿ
"ವಿಶ್ವಾಸ," "ನಂಬಿಕೆ," "ನಂಬು" —61 ಸಾರಿ
"ಪಾಪ," "ಪಾಪಿ," "ಪಾಪದಿಂದ" —58 ಸಾರಿ
"ಮರಣ," "ಸಾಯಿ," "ಕೊಲ್ಲು" —48 ಸಾರಿ
"ಶರೀರ," "ಶಾರೀರಿಕ," "ಪ್ರಾಕೃತಿಕ" —30 ಸಾರಿ
"ಕೃಪೆ" —25 ಸಾರಿ
"ಪರಿಶುದ್ಧ" (ಮತ್ತು ಸಂಬಂಧಿತ ಪದಗಳು)—24 ಸಾರಿ

ರೋಮಾಪುರದವರಿಗೆ ಬರೆದ ಪತ್ರಿಕೆಯ ಕೆಲವು ಪಾಠಗಳು ಈ ಪ್ರಮುಖ ಮತ್ತು ಇತರ ಪದಗಳ ಅಧ್ಯಯನದೊಂದಿಗೆ ಆರಂಭವಾಗುತ್ತವೆ. ಈ ಆವೃತ್ತಿಯಲ್ಲಿ ಮತ್ತು ಇದರ ಸಹ ಪುಸ್ತಕದಲ್ಲಿ ಈ ಪದಗಳು ಕಾಣಿಸಿಕೊಳ್ಳುವ ವಿವಿಧ ಅಧ್ಯಾಯಗಳ ನಂತರ ಇವುಗಳೊಳಗೆ ಕೆಲವು ಪದಗಳು "ಹೆಚ್ಚಿನ ಅಧ್ಯಯನದಲ್ಲಿ" ವಿಶೇಷವಾಗಿ ತೋರಿಸಲಾಗಿದೆ. ಈ ವಿಭಾಗಗಳು ಹೇಗೆ ಪೌಲನು ತನ್ನ ಇಚ್ಛೆಯಂತೆಯೇ ಈ ಶೈಲಿಯಲ್ಲಿ ತನ್ನ ವಾದವನ್ನು ಕಟ್ಟುತ್ತಾ ಹೋದನೆಂಬದನ್ನು ನಿಮಗೆ ತೋರಿಸಿಕೊಡುವವು.

## ಸಂಕ್ಷಿಪ್ತ ವರ್ಣನೆ

ಪೌಲನ ಅನೇಕ ಪತ್ರಿಕೆಗಳು ದೈವಶಾಸ್ತ್ರದ ("ಸಿದ್ಧಾಂತ") ಉಪದೇಶದೊಂದಿಗೆ ಆರಂಭವಾಗುತ್ತವೆ ಮತ್ತು ಪ್ರಾಯೋಗಿಕ ಅನ್ವಯದೊಂದಿಗೆ ಮುಕ್ತಾಯಗೊಳಿಸುತ್ತಾನೆ. ರೋಮಾಪುರದವರಿಗೆ ಬರೆದ ಪತ್ರಿಕೆಯಲ್ಲಿ ಸಹ ಹೀಗೆಯೇ ಇರುತ್ತದೆ—ಆದರೆ ಲೇಖಕರು ಇವೆರಡು ಒತ್ತುಗಳನ್ನು ವಿಭಾಗಿಸುವ ಬಗ್ಗೆ ಸಮ್ಮತಿಸುವದಿಲ್ಲ. ಉದಾಹರಣೆಗೆ, ಕೆಲವರು 9-11ರ ವರೆಗಿನ ಅಧ್ಯಾಯಗಳನ್ನು ದೈವಶಾಸ್ತ್ರದ ವಿಭಾಗದಲ್ಲಿ ಸೇರಿಸಿದರೆ, ಇನ್ನು ಕೆಲವರು ಈ ಅಧ್ಯಾಯಗಳನ್ನು ಅನ್ವಯಿಕೆಗಳೆಂದು ಹೆಸರಿಸುತ್ತಾರೆ. ಇನ್ನು ಕೆಲವರು ದೈವಶಾಸ್ತ್ರದ ವಿಭಾಗವು 5ನೇ ಅಧ್ಯಾಯಕ್ಕೆ ಮುಗಿದುಹೋಗುತ್ತದೆಂದು ಸಹ ಹೇಳುತ್ತಾರೆ.

ಈ ಪತ್ರಿಕೆಯ ಸಂಕ್ಷಿಪ್ತ ವರ್ಣನೆಯ ಒಂದು ಸರಳ ವಿಧವೆಂದರೆ ಅದನ್ನು ಎರಡು

ಸಮಾನ ಭಾಗವಾಗಿ ಮಾಡುವದು: ಮೊದಲ ಎಂಟು ಅಧ್ಯಾಯಗಳು (1-8) ಮತ್ತು ಕೊನೆಯ ಎಂಟು ಅಧ್ಯಾಯಗಳು (9-16). ಅಧ್ಯಾಯ 1-8 ರಲ್ಲಿ, ಪೌಲನು ತನ್ನ ಆಧಾರವಾಕ್ಯವನ್ನು ಸ್ಥಿರಪಡಿಸುತ್ತಾನೆ; 9 ರಿಂದ 16 ಅಧ್ಯಾಯಗಳಲ್ಲಿ ಆತನು ತನ್ನ ಆಧಾರವಾಕ್ಯವನ್ನು ಅನ್ವಯಿಸುತ್ತಾನೆ. ಕೊನೆಯ ಎಂಟು ಅಧ್ಯಾಯಗಳು ಬಹಳ ಸಹಜವಾಗಿ ತಮ್ಮೊಳಗೆ ವಿಂಗಡಗೊಳ್ಳುತ್ತವೆ. 9 ರಿಂದ 11 ಅಧ್ಯಾಯಗಳಲ್ಲಿ, ಪೌಲನು ಹೇಗೆ ತನ್ನ ಆಧಾರವಾಕ್ಯವನ್ನು Jim McGuiggan ಕರೆಯುವ ಪ್ರಕಾರ "ಯೆಹೂದಿ ಸಮಸ್ಯೆ" ಯೊಂದಿಗೆ ಸಮಾಧಾನಮಾಡಿಕೊಳ್ಳಬಹುದು ಎಂಬದಾಗಿ ವಿವರಿಸುತ್ತಾನೆ.[32] ಅಧ್ಯಾಯ 12 ರಿಂದ 16 ರಲ್ಲಿ, ಅಪೊಸ್ತಲನು ತನ್ನ ಆಧಾರವಾಕ್ಯವನ್ನು ಅನುದಿನ ಜೀವಿತದ ಸವಾಲುಗಳಿಗೆ ಅನ್ವಯಿಸುತ್ತಾನೆ. ಈ ಭಾವಗಳನ್ನೊಳಗೊಂಡ ಸಂಕ್ಷಿಪ್ತ ವರ್ಣನೆ ಕೆಳಗಡೆಯಲ್ಲಿರುತ್ತದೆ. ಈ ಸಂಕ್ಷಿಪ್ತ ವರ್ಣನೆ ಒಬ್ಬನು ತನ್ನ ವಾಚನ ಮತ್ತು ಅಧ್ಯಯನವನ್ನು ವ್ಯವಸ್ಥಿತಗೊಳಿಸಿಕೊಳ್ಳಲು ಸಹಾಯಕವಾಗಿರುತ್ತದೆ. ಇದನ್ನು ಕಂಠಪಾಠ ಮಾಡಿದರೂ ಬಹಳ ಉತ್ತಮವಾಗಿರುವದು.

ಪರಿಚಯ (1:1-17)

- I. ಸಿದ್ಧಾಂತ (1:18-8:39)
  - A. ಶಿಕ್ಷೆ ವಿಧಿಸು (1:18-3:20)
    1. ಅನ್ಯಜನರು
    2. ಯೆಹೂದ್ಯರು
  - B. ನೀತಿವಂತಿಕೆಯ ನಿರ್ಣಯ (3:21-5:21)
  - C. ಶುದ್ಧೀಕರಣ (6:1-7:25)
  - D. ಮಹಿಮೆಕರಣ (8:1-39)
- II. ಅಭ್ಯಾಸಕ್ಕಾಗಿ (9:1-15:13)
  - A. ವಿವರಣೆ (9:1-11:36)
    1. ನಂಬಿಕೆಯಿಂದ ನೀತಿವಂತಿಕೆಯು ಇಸ್ರಾಯೇಲರಿಗೆ ಮಾಡಿ ವಾಗ್ದಾನ ದೊಂದಿಗೆ ಸಮಾಧಾನವಾಗುವದು
    2. ನಂಬಿಕೆಯಿಂದ ನೀತಿವಂತಿಕೆಯು ದೇವರ ನಂಬಿಗಸ್ತಿಕೆಯೊಂದಿಗೆ ಸಮಾಧಾನವಾಗುವದು
  - B. ಅನ್ವಯಿಕೆ (12:1-15:13)

ಮುಕ್ತಾಯ (15:14-16:27)

ಅನೇಕ ಲೇಖಕರು ತಮ್ಮ ಸಂಕ್ಷಿಪ್ತ ವರ್ಣನೆಗಳಲ್ಲಿ ತಾವು ಮುಖ್ಯಪದಗಳೆಂದು ಪರಿಗಣಿಸುವ ಪದಗಳನ್ನು ಸೇರ್ಪಡೆಗೊಳಿಸಿಕೊಳ್ಳುತ್ತಾರೆ. "ನೀತಿವಂತಿಕೆ" ಎಂಬ ಪದವು ಕಾಣಿಸಿಕೊಳ್ಳುವ ಪ್ರಾಸವನ್ನು ಉಪಯೋಗಿಸುವ ಒಂದು ಸಂಕ್ಷಿಪ್ತ ವರ್ಣನೆಯ ಹೃದಯಭಾಗ ಇಲ್ಲಿದೆ:[33]

I. ಪಾಪ (1:18-3:20): ನೀತಿಯ ಅಗತ್ಯವಿರುತ್ತದೆ
II. ರಕ್ಷಣೆ (3:21-5:21): ನೀತಿಯು ಆರೋಪಿಸಲ್ಪಟ್ಟದ್ದು
III. ಶುದ್ಧೀಕರಣ (6:1-8:39): ನೀತಿಯು ಕೊಡಲ್ಪಟ್ಟಿದ್ದು
IV. ಸಾರ್ವಭೌಮತೆ (9:1-11:36): ನೀತಿಯು ತಿರಸ್ಕರಿಸಲ್ಪಟ್ಟಿದ್ದು
V. ಸೇವೆ (12:1-15:13): ನೀತಿಯು ಆಚರಣೆಗೆ ತರಲ್ಪಟ್ಟಿದ್ದು

# ಅನ್ವಯಿಸುವಿಕೆ

## ಒಂದು ಮರೆಯಲಾಗದ ಪ್ರಯಾಣ

ನಾವು ಈಗ ಒಂದು ಪ್ರಯಾಣವನ್ನು ಆರಂಭಿಸಲಿದ್ದೇವೆ. ಇದೊಂದು ಉತ್ಸಾಹದ ಪ್ರಯಾಣವಾಗಿರತಕ್ಕದ್ದು, ಆದರೆ ಪ್ರಯಾಣ ಕೆಲವು ಸಾರಿ ಕಠಿಣವಾಗುವದು. ಏನೇ ಇದ್ದರೂ, ಇದು ನೀವು ಜೀವಿತದಲ್ಲಿಯೇ ಮಾಡುವ ಅತ್ಯಂತ ಪ್ರಾಮುಖ್ಯವಾದ ಪ್ರಯಾಣವಾಗಬಹುದು. ನಾವು ರೋಮಾಪುರವರಿಗೆ ಬರೆದ ಪತ್ರಿಕೆಯ ಮೂಲಕ ಪ್ರಯಾಣಿಸಲಿದ್ದೇವೆ.

ಯಾವದೇ ಪ್ರಯಾಣವನ್ನು ಮಾಡುವ ಮುನ್ನ ಸಿದ್ಧತೆಯು ಅವಶ್ಯಕವಾಗಿರುತ್ತದೆ. ಬಟ್ಟೆ, ಅಗತ್ಯವಸ್ತುಗಳನ್ನು ಇಟ್ಟುಕೊಳ್ಳಬೇಕು ಮತ್ತು ಸಂಪರ್ಕಿಸಲು ನಕ್ಷೆಗಳನ್ನಿಟ್ಟು ಕೊಳ್ಳಬೇಕು. ಅದೇ ರೀತಿಯಲ್ಲಿ, ಪರಿಚಯ ಭಾಗವು ನಿಮ್ಮನ್ನು ಮುಂದಿರುವ ಪ್ರಯಾಣಕ್ಕಾಗಿ ತಯಾರುಗೊಳಿಸುವದಕ್ಕಾಗಿದೆ. ಒಂದು ಗುರಿಯೆಂದರೆ ನೀವು ಮತ್ತು ನಾನು ಆರಂಭಿಸಲಿರುವ ಮಾರ್ಗದರ್ಶಿತ ಪ್ರಯಾಣಕ್ಕಾಗಿ ಸಿದ್ಧಪಡಿಸಿಕೊಳ್ಳುವದಾಗಿದೆ. ಇನ್ನೊಂದು ಗುರಿಯೇನೆಂದರೆ ಸ್ವತಃ ನೀವೆ ರೋಮಾಪುರದವರಿಗೆ ಬರೆದ ಪತ್ರಿಕೆಯ ಮೂಲಕ ದಾರಿ ಕಂಡುಹಿಡಿಯುತ್ತಾ ಸಾಗುವವರಾಗುವಂತೆ ಸನ್ನದ್ಧರಾಗುವದು.

ಮಾರ್ಗದರ್ಶಿತ ಹಾಗೂ ಸ್ವತಃ ಕಂಡುಹಿಡಿದು ಮಾಡುವ ಎರಡೂ ಪ್ರಯಾಣಗಳಲ್ಲಿ ಲಾಭ ಮತ್ತು ನಷ್ಟಗಳಿರುತ್ತವೆ. 1974 ರಲ್ಲಿ, ನನ್ನ ಕುಟುಂಬ ಮತ್ತು ನಾನು ನಮ್ಮಷ್ಟಕ್ಕೆ ನಾಲ್ವತ್ತೈದು ದಿನಗಳನ್ನು ಯುರೋಪಿನಲ್ಲಿ ಕಳೆದೆವು, ನಾವು ಭೇಟಿಮಾಡಿದ ಬಹುಪಾಲು ದೇಶಗಳ ಭಾಷೆಗಳನ್ನು ತಿಳಿಯದವರಾಗಿದ್ದೆವು. ನಮಗಿದ್ದ ಒಂದೇ ಮೂಲಾಧಾರವೆಂದರೆ *ದಿನಕ್ಕೆ ಐದರಿಂದ ಹತ್ತು ಡಾಲರ್ ಗಳಲ್ಲಿ ಯೂರೋಪ್* ಎಂಬ ಪುಸ್ತಕ. ನಾನು ಆ ಪುಸ್ತಕದಲ್ಲಿ ಪ್ರಯಾಣದ ಟಿಪ್ಪಣಿಗಳನ್ನು ಬರೆಯುವಾಗ "ದಿನಕ್ಕೆ ಐದರಿಂದ ಹತ್ತು ಸಾರಿ ಕುಸಿದು ಕುಳಿತುಕೊಳ್ಳುವ ಯೂರೋಪ್" ಎಂದು ಬರೆದೆನು. ನಾನು ನಿರಂತರವಾಗಿ (*ತೀವ್ರವಾಗಿ* ಹಾರೈಸಿದ) "ನನಗೊಬ್ಬ ಮಾರ್ಗದರ್ಶಕನಿದ್ದರೆ" ಎಷ್ಟು ಚೆನ್ನಾಗಿರುತ್ತದೆ ಎಂದು ಕೊಂಡೆನು (ನೋಡಿರಿ ಅಪೊಸ್ತಲರ ಕೃತ್ಯಗಳು 8:31).

1989 ರಲ್ಲಿ, ನನಗೆ ಮತ್ತು ನನ್ನ ಹೆಂಡತಿ ಜೋ, ಒಟ್ಟಿಗೆ ಹನ್ನೆರಡು ದಿನಗಳ ಮಾರ್ಗದರ್ಶಕನ ಜೊತೆಗೆ ಟರ್ಕಿಯನ್ನು ("ಅಸ್ಯಸೀಮೆಯ ಏಳು ಸಭೆಗಳ ಸ್ಥಳ") ಮತ್ತು ಗ್ರೀಸ್ ಸುತ್ತಿ ನೋಡುವ ಅವಕಾಶ ಸಿಕ್ಕಿತು. ನಾವು ಆ ಹನ್ನೆರಡು ದಿನಗಳಲ್ಲಿ ನೋಡಿದಷ್ಟು ಸ್ಥಳಗಳನ್ನು ನಮ್ಮಷ್ಟಕ್ಕೆ ನಾವೇ ಸುತ್ತಿ ನೋಡಿದ್ದರೆ ಒಂದು ತಿಂಗಳಲ್ಲಿ ಸಹ ವೀಕ್ಷಿಸುವದಕ್ಕೆ ಆಗುತ್ತಿರಲಿಲ್ಲವೇನೋ. ಏನೇ ಇದ್ದರೂ, ನಮ್ಮ ಗುಂಪು ಸ್ಥಳದಿಂದ ಸ್ಥಳಕ್ಕೆ ಅವಸರದಿಂದ

ಸಾಗಿದಂತೆ, ಈ ಪ್ರಾಚೀನ ನಗರದ ಅವಶೇಷಗಳನ್ನು ಒಂದು ದಿನವೆಲ್ಲಾ ಸುತ್ತಿ ನೋಡಿದ್ದರೆ ಚೆನ್ನಾಗಿರುತ್ತಿತ್ತೆಂದು ಹಾರೈಸಿದೆನು. ನಾನು ಆ ಮಾರ್ಗದರ್ಶಕನು ಹೇಳುತ್ತಿರುವದನ್ನು, ಆ ನಗರಗಳಲ್ಲಿ ಅಪೊಸ್ತಲರು ಮತ್ತು ಆದಿ ಕ್ರೈಸ್ತರು ಹೇಗೆ ಓಡಾಡಿರಬಹುದೆಂಬ ಬಗ್ಗೆ ಇನ್ನಷ್ಟು ಮೆಲಕು ಹಾಕುವದಕ್ಕೆ ಹೆಚ್ಚು ಕಾಲಾವಕಾಶ ವಿರಬೇಕೆಂದು ಹಂಬಲಿಸುತ್ತಿದ್ದೆನು.

ರೋಮಾಪುರದವರಿಗೆ ಬರೆದ ಪತ್ರಿಕೆಯ ಅಭ್ಯಾಸದ ನಮ್ಮ ಪ್ರಯಾಣವು ದೇವರು ನಮಗೆ ಕೊಟ್ಟಿರುವ ಪ್ರಾಚಿನ ಹಸ್ತಪ್ರತಿಯ ಮೂಲಕ ಸಾಗುವದಾಗಿದೆ. ನಿಮ್ಮ ಪ್ರಯಾಣದ ಮಾರ್ಗದರ್ಶಕನಾಗಿ, ನಾನು "ಆಸಕ್ತಿಕರವಾದ ಸ್ಥಳಗಳ" ಬಗ್ಗೆ ಉಲ್ಲೇಖಿಸಲಿದ್ದೇನೆ. ನಾನು ಈ ಪ್ರಯಾಣವನ್ನು ಸಾಧ್ಯವಾದಷ್ಟು ಮಟ್ಟಿಗೆ ಖುಷಿಕೊಡುವಂಥ ಮತ್ತು ಒತ್ತಡವಿಲ್ಲದ್ದಾಗಿ ಮಾಡುವದಕ್ಕೆ ಪ್ರಯತ್ನಿಸುತ್ತೇನೆ. ಸಾಗುವ ದಾರಿ ಕಠಿಣ ಮತ್ತು ಇಳಿಜಾರುಗಳಿಂದ ಕೂಡಿದ್ದರೆ, ನಾನು ನಿಮಗೆ ಹತ್ತುವದಕ್ಕೆ ಸಹಾಯ ಮಾಡುವೆನು. ಅದೇ ಸಮಯದಲ್ಲಿ, ನಿಮ್ಮ ಸ್ವಪ್ರಯಾಣವನ್ನು ನೀವೇ ಮಾಡಬೇಕಾಗಬಹುದು. ನನ್ನ ವ್ಯಾಖ್ಯಾನಗಳನ್ನು ಓದುವದಕ್ಕೆ ಮುಂಚೆ, ವಾಕ್ಯಭಾಗಗಳನ್ನು ನೀವೇ ಓದಿಕೊಳ್ಳಿರಿ-ಹಲವಾರು ಸಾರಿ. ಅದರ ಬಗ್ಗೆ ಅಲೋಚಿಸಿರಿ; ಅದರ ಬಗ್ಗೆ ಪ್ರಾರ್ಥಿಸಿರಿ. "ಪೌಲನು ಮೂಲ ವಾಚಕರಿಗೆ ಏನು ಹೇಳುತ್ತಿದ್ದಾನೆ?" ಎಂದು ನಿಮ್ಮನ್ನು ನೀವು ಕೇಳಿಕೊಳ್ಳಿರಿ. ನಂತರ "ಈ ವಚನಗಳಲ್ಲಿ ದೇವರು ನನಗೆ ಏನು ಹೇಳುತ್ತಿದ್ದಾನೆ?" ಎಂದು ಕೇಳಿಕೊಳ್ಳಿರಿ.

ನಾವು ಒಟ್ಟಾಗಿ ಮಾಡುವ ಪ್ರಯಾಣಕ್ಕಾಗಿ ಮತ್ತು ನಿಮ್ಮನ್ನು ನಿಮ್ಮ ಸ್ವಂತ ಪ್ರಯಾಣಕ್ಕಾಗಿ ಸಿದ್ಧಗೊಳಿಸುವದಕ್ಕೆ ಇನ್ನಷ್ಟು ಸಂಗತಿಗಳನ್ನು ಹೇಳಬಹುದು, ಆದರೆ ಈ ಕ್ಷಣಕ್ಕೆ ಪರಿಚಯ ಭಾಗದಲ್ಲಿರುವ ಮಾಹಿತಿಯು ಸಾಕಾಗುವದು. ನಾನು ಸಲಹೆಮಾಡಿದಂತೆ ನೀವು ಓದುವದಕ್ಕೆ ಇದು ಸಮಯವಾಗಿರುತ್ತದೆ. ನೀವು ಸಮಯ ಮಾಡಿಕೊಂಡು ಪತ್ರಿಕೆಯನ್ನು ಒಂದೇ ಸಾರಿ ಕುಳಿತು ಓದಬಲ್ಲಿರಾದರೆ-ಹಲವಾರು ಸಾರಿ- ಓದುವುದು ಒಳ್ಳೇದು.

ನಾನು ಬೆಳೆಯುತ್ತಿದ್ದಾಗ, ಸಭೆಯ ಸದಸ್ಯರು ಆರಾಧನೆಗೆ ಹೋಗಬೇಕಾದರೆ ಬಹಳಷ್ಟು ದೂರ ಪ್ರಯಾಣ ಮಾಡಬೇಕಿತ್ತು. ಪ್ರಾರ್ಥನೆಯಲ್ಲಿ ನಡೆಸುವವರು ಅನೇಕ ವೇಳೆ "ಪ್ರಯಾಣದ ದಯೆಗಾಗಿ" ದೇವರಿಗೆ ಬೇಡಿಕೊಳ್ಳುತ್ತಿದ್ದರು: ಪ್ರತಿಯೊಬ್ಬನು ಮನೆಗೆ ಪ್ರಯಾಣ ಬೆಳೆಸುವಾಗ ದೇವರು ಅವರನ್ನು ಕಾಯ್ದುಕಾಪಾಡುವಂತೆ ಬೇಡುತ್ತಿದ್ದರು. ನಾವು ಉತ್ಸಾಹಕರ—ಆದರೆ ಬೆದರಿಕೆಯುಂಟುಮಾಡುವ - ರೋಮಾಪುರದವರಿಗೆ ಬರೆದ ಪತ್ರಿಕೆಯ ಮೂಲಕ ಆತ್ಮೀಕ ಪ್ರಯಾಣವನ್ನು ಆರಂಭಿಸುತ್ತಿರುವಾಗ, "ಪ್ರಯಾಣದ ದಯೆಗಾಗಿ" ದೇವರನ್ನು ಬೇಡಿಕೊಳ್ಳೋಣ.

"ಒಂದು ಸಾವಿರ ಮೈಲುಗಳ ಪ್ರಯಾಣವು ಒಂದು ಹೆಜ್ಜೆಯಿಂದ ಪ್ರಾರಂಭವಾಗತಕ್ಕದ್ದು" ಎಂಬ ಮಾತಿದೆ.[34] ನಾವು ಆ ಮೊದಲ ಹೆಜ್ಜೆಯನ್ನು ಅಧ್ಯಾಯ 1 ರಲ್ಲಿ ಪ್ರಾರಂಭಿಸೋಣ.

## ಒಂದು ವಿಶೆಷ ಟಿಪ್ಪಣಿ

Abilene Christian ಕಾಲೇಜಿನಲ್ಲಿ (ಈಗ ವಿಶ್ವವಿಧ್ಯಾಲಯ) ನನ್ನ ಮೆಚ್ಚಿನ

ತರಗತಿಯೆಂದರೆ J. D. Thomasರ ನಾಯಕತ್ವದಲ್ಲಿ ತೆಗೆದುಕೊಳ್ಳುತ್ತಿದ್ದ "ರೋಮಾಪುರದವರಿಗೆ ಬರೆದ ಪತ್ರಿಕೆ." ಇಷ್ಟೊಂದು ವರ್ಷಗಳಲ್ಲಿ, ರೋಮಾಪುರದವರಿಗೆ ಬರೆದ ಪತ್ರಿಕೆಯ ಮೇಲೆ ನಾನು ಅನೇಕ ತರಗತಿಗಳನ್ನು ಕಲಿಸಿದ್ದೇನೆ, ಅದರಲ್ಲಿ ನಾನು Macquarie School of Preaching Australia ದಲ್ಲಿ ಹತ್ತುವರ್ಷಗಳ ಕಾಲ ತೆಗೆದುಕೊಂಡ ತರಗತಿಗಳೂ ಸೇರಿವೆ. ಹೀಗಿದ್ದರೂ ಅದರ ವ್ಯಾಪ್ತಿ ಮತ್ತು ಆಳವನ್ನು ಕಂಡು ನನಗೆ ಯಾವಾಗಲೂ ಅಂಜಿಕೆಯಾಗುತ್ತದೆ.

ಬೋರ್ಡಿನ ಮೇಲೆ ಒಂದು ದೊಡ್ಡ ವೃತ್ತಹಾಕಿ ಅದನ್ನು "ದೇವರ ಗುಣಸ್ವಭಾವ" ಎಂದು ಹೆಸರಿಸುತ್ತಿದ್ದ ತನ್ನ ಕಾಲೇಜಿನ ಒಬ್ಬ ಸಹಪಾಠಿ ಪ್ರಾಧ್ಯಾಪಕರ ಬಗ್ಗೆ Glen Pace ಸ್ವಾರಸ್ಯಕರ ಘಟನೆಯನ್ನು ತಿಳಿಸುತ್ತಾರೆ. ನಂತರ ಆ ಪ್ರಾಧ್ಯಾಪಕರು ಅದ ರೊಳಗೊಂದು ಚಿಕ್ಕ ವೃತ್ತವನ್ನು ಬರೆದು "ನನಗೆ ಇಷ್ಟು ಮಾತ್ರವೇ ಅರ್ಥವಾಗಿದೆ" ಎಂದು ಹೇಳಿದನು. ಒಂದು ದಿನ ಒಬ್ಬ ವಿದ್ಯಾರ್ಥಿ ಹೀಗೆ ಹೇಳಿದನು, "ನೀವು ಆ ದೃಷ್ಟಾಂತವನ್ನು ಬರೆಯುವ ಪ್ರತಿ ಸಾರಿಯೂ ಆ ಚಿಕ್ಕ ವೃತ್ತವು ಚಿಕ್ಕದಾಗುತ್ತಲೇ ಸಾಗುವದನ್ನು ಗಮನಿಸಿದ್ದೇನೆ."[35] ಆ ಉಪದೇಶಕರಿಗೆ ಹೇಗೆ ಅನ್ನಿಸಿರಬಹುದೆಂದು ನನಗೆ ಅರ್ಥವಾಗುತ್ತದೆ. ನಾನು ರೋಮಾಪುರದವರಿಗೆ ಬರೆದ ಪತ್ರಿಕೆಯನ್ನು ಹೆಚ್ಚು ಅಧ್ಯಯನ ಮಾಡಿದ ಹಾಗೆ, ನನಗೆ ಎಷ್ಟು ಅಲ್ಪವಾಗಿ ತಿಳಿದದೆ ಎಂಬದು ನನ್ನ ಅರಿವಿಗೆ ಬರುತ್ತದೆ.

## ಉಪದೇಶಕರು ಮತ್ತು ಬೋಧಕರಿಗೆ ಒಂದು ಟಿಪ್ಪಣಿ

ನೀವು ರೋಮಾಪುರದವರಿಗೆ ಬರೆದ ಪತ್ರಿಕೆಯ ಮೇಲೆ ತರಗತಿಯನ್ನು ತೆಗೆದುಕೊಂಡರೆ, ನೀವು ಬಹುಶಃ ಒಂದು ಪರಿಚಯದ ಪಾಠವನ್ನು ಸೇರ್ಪಡೆಗೊಳಿಸಿಕೊಳ್ಳಬಹುದು. ನೀವು ರೋಮಾಪುರದವರಿಗೆ ಬರೆದ ಪತ್ರಿಕೆಯಿಂದ ಬೋಧಿಸುವದಕ್ಕೆ ನಿರ್ಧರಿಸಿದರೆ, ನೀವು ಅಧ್ಯಾಯ 1 ರಿಂದ ನಿಮ್ಮ ಸರಣಿಯನ್ನು ಪ್ರಾರಂಭಿಸಲಿಚ್ಛಿಸಬಹುದು. ರೋಮಾಪುರದವರಿಗೆ ಬರೆದ ಪತ್ರಿಕೆಯ ಅನೇಕ ಅಧ್ಯಯನಗಳು ಪೌಲನ ಜೀವನ, ಕೆಲಸ ಮತ್ತು ಗುಣಗಳ ಒಂದು ಸಮೀಕ್ಷೆಯೊಂದಿಗೆ ಪ್ರಾರಂಭಗೊಳ್ಳುತ್ತವೆ. ನಿಮ್ಮ ಶ್ರೋತೃಗಳಿಗೆ ಅಪೊಸ್ತಲನ ಪರಿಚಯವಿಲ್ಲವಾದರೆ, ನೀವು ಇಂಥ ಒಂದು ಸಮೀಕ್ಷೆಯೊಂದಿಗೆ ಆರಂಭಿಸಲಿಚ್ಛಿಸಬಹುದು.

ಈ ವ್ಯಾಖ್ಯಾನಗ್ರಂಥವನ್ನು ಮೂರು ಮುಖ್ಯವಾದ ಉಪಯೋಗಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆಯಲಾಗಿರುತ್ತದೆ. ರೋಮಾಪುರದ ಮೇಲೆ ಸಂದೇಶಗಳ ಸರಣಿಯನ್ನು ಸ್ವಲ್ಪ ಜನರು ಮಾತ್ರವೆ ಮಾಡುವರು. ಅನೇಕರು ರೋಮಾಪುರದವರಿಗೆ ಬರೆದ ಪತ್ರಿಕೆಯ ಮೇಲೆ ತರಗತಿಗಳನ್ನು ನಡಿಸುವರು. ಇತರರು ವ್ಯಾಖ್ಯಾನಗ್ರಂಥವನ್ನು ತಮ್ಮ ವೈಯಕ್ತಿಕ ಭಕ್ತಿವೃದ್ಧಿಗೆ ಅಧ್ಯಯನ ಮಾಡುತ್ತಾರೆ.

ರೋಮಾಪುರದವರಿಗೆ ಬರೆದ ಪತ್ರಿಕೆಯ ಮೇಲೆ ಬೋಧಿಸುವವರಿಗೆ ಸಹಾಯ ಮಾಡಲು, ಕೇವಲ ವಚನದಿಂದ -ವಚನದ ಅಧ್ಯಯನಮಾಡುವ ಬದಲಾಗಿ, ನಾನು ಅನ್ವಯಿಕೆ ವಿಭಾಗದಲ್ಲಿ ಪ್ರಸಂಗದ ಸಲಹೆಗಳನ್ನು ಸಹ ಸೇರಿಸಿದ್ದೇನೆ. ವ್ಯಾಖ್ಯಾನಗಳು ಪ್ರಸಂಗಿಸುವದಕ್ಕೆ ಸಮಂಜಸವಾಗಿರುವದಕ್ಕಿಂತಲೂ ಹೆಚ್ಚು ಪ್ರಾಮುಖ್ಯವಾದ ಮಾಹಿತಿಗಳನ್ನು ಒಳಗೊಂಡಿರುತ್ತದೆ. ನೀವು ಉಪಯೋಗಿಸುವ ಸಾಮಗ್ರಿಯನ್ನು

ಜಾಗ್ರತೆಯಿಂದ ಆರಿಸಿಕೊಳ್ಳಿರಿ.

ರೋಮಾಪುರದವರಿಗೆ ಬರೆದ ಪತ್ರಿಕೆಯಿಂದ ಉಪದೇಶಿಸುವವರಿಗೆ ಸಹಾಯ ಮಾಡುವದಕ್ಕೆ, ನಾನು ವಾಕ್ಯಭಾಗವನ್ನು ವಿವರಿಸಿ ಯಾವ ಪ್ರಶ್ನೆಗಳು ಕೇಳಲ್ಪಡಬಹುದೆಂದು ನಿರೀಕ್ಷಿಸಿ ಉತ್ತರಿಸಿದ್ದೇನೆ. ಹೇಗೂ, ಇದನ್ನು ತಿಳಿದುಕೊಳ್ಳಿರಿ, ಏನೆಂದರೆ ಇದರಲ್ಲಿ ಕೆಲವು ಮಾಹಿತಿ ನಿಮಗಾಗಿಯೇ ಹೊರತು ನಿಮ್ಮ ವಿದ್ಯಾರ್ಥಿಗಳಿಗಲ್ಲ. ಉದಾಹರಣೆಗೆ, ನಿಮ್ಮ ತರಗತಿಯಲ್ಲಿ ಬಹುಪಾಲು ವಿದ್ಯಾರ್ಥಿಗಳು ಗ್ರೀಕ್ ಪದಗಳಲ್ಲಿ ಆಸಕ್ತಿಯನ್ನು ತೋರುವದಿಲ್ಲ.

ನೀವು ಈ ಪಾಠಗಳನ್ನು ವೈಯಕ್ತಿಕ ಭಕ್ತಿವೃದ್ಧಿಗಾಗಿ ಅಧ್ಯಯನ ಮಾಡುವದಾದರೆ, ಈ ಪುಸ್ತಕದಲ್ಲಿರುವದೆಲ್ಲವೂ ನಿಮಗಾಗಿಯೇ ಆಗಿದೆ. ನಾನು ನಿಮಗೆ ನೀವು ಓದುವದನ್ನೆಲ್ಲಾ ಸತ್ಯವೇದದೊಂದಿಗೆ ಹೋಲಿಸಿನೋಡಬೇಕೆಂದು ಮಾತ್ರ ಎಚ್ಚರಿಸುತ್ತೇನೆ. ಅದು ದೇವರ ವಾಕ್ಯದೊಂದಿಗೆ ಒಪ್ಪುವದಾದರೆ ಅದನ್ನು ಸ್ವೀಕರಿಸಿಕೊಳ್ಳಿರಿ. ಅದು ವಾಕ್ಯಕ್ಕೆ ವಿರುದ್ಧವೇನಿಸಿದರೆ ಅದನ್ನು ತಿರಸ್ಕರಿಸಿರಿ.

---

**ಅಡಿ ಟಿಪ್ಪಣಿಗಳು**

[1]Charles Hodge, *Commentary on the Epistle to the Romans* (Princeton, N.J.: N.p., 1886; reprint, Grand Rapids, Mich.: Wm. B. Eerdmans Publishing Co., 1968), 9. [2]Philo *On the Embassy to Gaius* 155. ತಿಬೆರಿಯ ನದಿಯ ಪಶ್ಚಿಮ ದಿಕ್ಕಿನಲ್ಲಿ ಯೆಹೂದ್ಯರು ವಾಸಿಸುತ್ತಿದ್ದ ಜಿಲ್ಲೆಯು Trastevere ("beyond the Tiber") ಎಂದು ಪರಿಚಿತವಿತ್ತು. [3]D. D. Whedon, *Commentary on the New Testament, vol. III, Acts—Romans* (New York: Hunt & Eaton, 1892), 285. Suetonius ಹೀಗೆ ಬರೆದನು, "ಯೆಹೂದ್ಯರು ನಿರಂತರವಾಗಿ Chrestus ನ ಕುಮ್ಮಕ್ಕಿನಿಂದಾಗಿ ಗದ್ದಲಗಳನ್ನು ಮಾಡುತ್ತಿದ್ದದರಿಂದ, [ಔಗಸ್ತ ಚಕ್ರವರ್ತಿಯು] ಅವರನ್ನು ರೋಮಾಪುರದಿಂದ ಹೊರಗೆ ಹಾಕಿದನು" (Seutonius *Life of Claudius* 25.4; see Acts 18:2). [4]See James R. Edwards, *Romans*, New International Biblical Commentary (Peabody, Mass.: Hendrickson Publishers, 1992), 355–57. [5]ರೋಮಾಪುರ ಮತ್ತು 1 ಕೊರಿಂಥ ಎರಡೂ ಪತ್ರಿಕೆಗಳು ಹದಿನಾರು ಅಧ್ಯಾಯಗಳನ್ನು ಹೊಂದಿವೆ. ಆದರೆ ರೋಮಾಪುರ ಪತ್ರಿಕೆಯು ದೀರ್ಘವಾದದ್ದಾಗಿದೆ. Leon Morris ಹೇಳಿದ್ದೇನೆಂದರೆ "ರೋಮಾಪುರದವರಿಗೆ ಬರೆದ ಪತ್ರಿಕೆಯು [ಪೌಲನ] ಉದ್ದವಾದ ಪತ್ರಿಕೆಯಾಗಿದೆ, ಅದು ಸುಮಾರು 7,100 ಪದಗಳನ್ನೊಳಗೊಂಡಿದೆ" (Leon Morris, *The Epistle to the Romans* [Grand Rapids, Mich.: Wm. B. Eerdmans Publishing Co., 1988], 2). [6]Dave Miller, "The Meaning of Romans (1)," sermon presented on the *Truth in Love* television program, Fort Worth, Texas, 2 January 2002. [7]Douglas J. Moo, *Romans*, The NIV Application Commentary (Grand Rapids, Mich.: Zondervan Publishing House, 2000), 19. [8]ವಿದ್ವಾಂಸರು *kerygma* ಎಂಬ ಪದವನ್ನು ಉಪಯೋಗಿಸುತ್ತಾರೆ, ಇದು ಗ್ರೀಕ್.ನ κήρυγμα ಎಂಬ ಪದದ ಅಕ್ಷರಶಃ ಅನುವಾದವಾಗಿದೆ, ಅದರರ್ಥವು, "ಬೋಧಿಸಲ್ಪಟ್ಟದ್ದು" ಅಥವಾ "ಸಂದೇಶ." ಈ "ಮೊದಲ ಸೂತ್ರಗಳು" ಎಂಬುದರ ಕುರಿತು ಇಬ್ರಿಯ 5:12ನ್ನು ನೋಡಿರಿ (KJV). [9]Charles R. Swindoll, *Coming to Terms with Sin: A Study of Romans 1—5* (Anaheim, Calif.: Insight for Living, 1999), 6. [10]ಸಭೆ ಮತ್ತು ಸಾರ್ವಜನಿಕವಾಗಿ ಆರಾಧಿಸುವ ಕ್ರಿಯೆಗಳಂತಹ ಮುಖ್ಯ ವಿಷಯಗಳ ಬಗ್ಗೆ ಅಷ್ಟಾಗಿ ಉಲ್ಲೇಖಿಸಲ್ಪಟ್ಟಿರುವದಿಲ್ಲ.

[11]Merrill C. Tenney, *New Testament Survey*, rev. Walter M. Dunnett (Grand Rapids, Mich.: Wm. B. Eerdmans Publishing Co., 1985), 305. [12]Moses E. Lard, *Commentary on Paul's Letter to Romans* (Lexington, Ky.: N.p., 1875; reprint, Delight, Ark.: Gospel

Light Publishing Co., n.d.), xx. [13]J. D. Thomas, *Romans*, The Living Word (Austin, Tex.: R. B. Sweet Co., 1965), 3. [14]Quoted in J. D. Thomas, Class Notes, *Romans*, Abilene Christian College (1955). [15]Samuel Taylor Coleridge, *Table Talk*, arr. and ed. T. Ashe (London: George Bell and Sons, 1896), 228. [16]Thomas, Class Notes. [17]Tenney, 306. [18]Edward Fudge, *Romans*, New Testament Helps (Athens, Ala.: C.E.I. Publishing Co., 1970), 12. [19]James Burton Coffman, *Commentary on Romans* (Austin, Tex.: Firm Foundation Publishing House, 1973), vi. [20]Moo, 20.

[21]Anders Nygren, *Commentary on Romans* (Philadelphia: Fortress Press, 1949), 2. [22]John R. W. Stott, *Men Made New: An Exposition of Romans 5—8* (Downers Grove, Ill.: Inter-Varsity Press, 1966), 9. [23]Chrysostom *Homilies on Romans* Argument. [24]Henry H. Halley, *Halley's Bible Handbook*, rev. ed. (Chicago: Henry H. Halley, 1955), 522. [25]Eugene H. Peterson, *The Message: New Testament with Psalms and Proverbs* (Colorado Springs, Colo.: NavPress Publishing Group, 1995), 359. [26]R. C. Bell, *Studies in Romans* (Austin, Tex.: Firm Foundation Publishing House, 1957), 2. [27]Prentice Meador, Jr., "When in Rome," sermon preached at Prestoncrest church of Christ, Dallas, Texas, 1 October, 2000. [28]Quoted in Thomas, *Romans*, 3. [29]ಈ ವಿಧೇಯತೆಗೆ ಸುವಾರ್ತೆಯನ್ನು ಕೇಳುವದು ಸೇರಿರುತ್ತದೆ (10:17), ಅದಕ್ಕೆ ಯೇಸು ಪುನರುತ್ಥಾನಗೊಂಡ ಕರ್ತನು ಎಂದು ಅರಿಕೆಮಾಡಿ, ನಂಬುವದನ್ನು ಒಳಗೊಂಡಿರುತ್ತದೆ (10:9, 10), ಪಾಪಕ್ಕೆ ಪಶ್ಚಾತ್ತಾಪಪಡುವದು (2:4) ಮತ್ತು ದೀಕ್ಷಾಸ್ನಾನ ಹೊಂದುವದು ಸೇರಿರುತ್ತದೆ (6:3-6). [30]Dale Hartman, class taught at Eastside church of Christ, Midwest City, Oklahoma, 11 January 2004.

[31]Larry Deason, *"The Righteousness of God" : An In-depth Study of Romans*, rev. ed. (Clifton Park, N.Y.: Life Communications, 1989), 16. [32]Jim McGuiggan, *The Book of Romans*, Looking Into The Bible Series (Lubbock, Tex.: Montex Publishing Co., 1982), 5. [33]ರೋಮಾಪುರದವರಿಗೆ ಬರೆದ ಪತ್ರಿಕೆಯ ಅನೇಕ ರೂಪರೇಖೆಗಳು "ನೀತಿವಂತಿಕೆ" ಎಂಬ ಪದದ ಸುತ್ತ ತಿರುಗಬಹುದು. ಇದು Warren W. Wiersbe, *Wiersbe's Expository Outlines on the New Testament ಎಂಬದರಲ್ಲಿನ ಸಂಕ್ಷಿಪ್ತ ವಿವರಣೆಯ ಮೇಲೆ ಆಧರಿಸಿದ್ದಾಗಿದೆ* (Wheaton, Ill.: Victor Books, 1992), 359. [34]Lao-tzu (c. 604–c. 531 B.C.), *The Way of Lao-tzu*, quoted in John Bartlett, *Bartlett's Familiar Quotations*, 16th ed., ed. Justin Kaplan (Boston: Little, Brown, and Co., 1992), 57. [35]Glen Pace, sermon preached at Judsonia church of Christ, Judsonia, Arkansas, n.d.